

# ಬಿಜೆಪಿ ಪ್ರಜಾ ಪ್ರಣಾಳಿಕೆ

## 2023



ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ

## ಸಮೃದ್ಧ ಕರ್ನಾಟಕಕ್ಕೆ
## ಬಿಜೆಪಿಯೇ ಭರವಸೆ

**ಭಾರತೀಯ ಜನತಾ ಪಾರ್ಟಿ, ಕರ್ನಾಟಕ**



# ಕರ್ನಾಟಕ @75


## ಅಮೃತ ಭಾರತಕ್ಕಾಗಿ ಅಮೃತ ಕರ್ನಾಟಕ

‘ಕರ್ನಾಟಕ ಗತ ವೈಭವ’ ಎಂಬ ಪ್ರಸಿದ್ಧ ಪುಸ್ತಕದಲ್ಲಿ, ಅದರ ಲೇಖಕ ಮತ್ತು ಇತಿಹಾಸಕಾರ ಶ್ರೀ ಆಲೂರು ವೆಂಕಟರಾಯರು ವಿಜಯನಗರ ಸಾಮ್ರಾಜ್ಯದ ದಿನಗಳಲ್ಲಿನ ಕರ್ನಾಟಕದ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ. ವಿಜಯನಗರ ಸಾಮ್ರಾಜ್ಯವು ಎಷ್ಟು ಸಮೃದ್ಧವಾಗಿತ್ತೆಂದರೆ, ಹಂಪಿಯ ಬೀದಿಗಳಲ್ಲಿ ಮುತ್ತು, ರತ್ನ, ಮಾಣಿಕ್ಯಗಳನ್ನು ಮಾರಾಟ ಮಾಡಲಾಗುತ್ತಿತ್ತು. ಹೇರಳವಾಗಿ ದೊರೆಯುತ್ತಿದ್ದ ರತ್ನಗಳನ್ನು ಕುದುರೆ ಲಗಾಮಿಗೆ ಅಲಂಕಾರವಾಗಿ ಮತ್ತು ಸಂಜೆ ಬೀದಿ ದೀಪಗಳಾಗಿ ಬಳಸಲಾಗುತ್ತಿತ್ತು. ವಿಜಯನಗರದ ಅರಸರು ವಾಸ್ತುಶಿಲ್ಪ, ಸಾಹಿತ್ಯ ಮತ್ತು ಕಲೆಯ ಮಹಾನ್ ಪೋಷಕರಾಗಿದ್ದರು. ಅವರ ಆಳ್ವಿಕೆಯಲ್ಲಿ ಹಲವಾರು ಪ್ರಸಿದ್ಧ ಕೃತಿಗಳು ರಚನೆಯಾಗಿವೆ. ಅದ್ಭುತ ವಾಸ್ತುಶಿಲ್ಪಗಳು ಇಂದಿಗೂ ವಿಜಯನಗರ ಸಾಮ್ರಾಜ್ಯದ ಶ್ರೇಷ್ಠತೆಗೆ ಸಾಕ್ಷಿಯಾಗಿ ನಮ್ಮ ಕಣ್ಣೆದುರಿವೆ.

ವಿಜಯನಗರ ಸಾಮ್ರಾಜ್ಯದ ಗತ ವೈಭವವನ್ನು ಪುನಃಸ್ಥಾಪಿಸಲು- ಆರ್ಥಿಕ ಶಕ್ತಿ, ಸಾಮಾಜಿಕ ಒಗ್ಗಟ್ಟು, ಸಾಂಸ್ಕೃತಿಕ ಮತ್ತು ನಾಗರಿಕತೆಯ ಬೆಳವಣಿಗೆ, ಪ್ರಕೃತಿ ಮಾತೆಯ ರಕ್ಷಣೆ ಮತ್ತು ರಾಷ್ಟ್ರೀಯತೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದ್ದೇವೆ. ಚುನಾಯಿತ ಪ್ರತಿನಿಧಿಗಳು, ವಿಷಯ ತಜ್ಞರು, ಉದ್ಯಮದ ಬಾಧ್ಯಸ್ಥರು ಮತ್ತು ಸಾರ್ವಜನಿಕರಿಂದ ಸಲಹೆಗಳನ್ನು ಸ್ವೀಕರಿಸಿದ ನಂತರ ಸುದೀರ್ಘ ಸಮಾಲೋಚನೆ ನಡೆಸಿ, ಸಮಾಜದ ಪ್ರತಿಯೊಂದು ವರ್ಗದ ಅಗತ್ಯತೆಗಳು ಮತ್ತು ಆಕಾಂಕ್ಷೆಗಳನ್ನು ಪರಿಗಣಿಸಿ 16 ಪ್ರಮುಖ ಭರವಸೆಗಳನ್ನು ಒಳಗೊಂಡ 103 ಭರವಸೆಗಳ ಪಟ್ಟಿ ಸಿದ್ಧವಾಗಿದೆ. ಅಗ್ರ ಭರವಸೆಗಳು ಅನ್ನ, ಅಭಯ, ಅಕ್ಷರ, ಆರೋಗ್ಯ, ಅಭಿವೃದ್ಧಿ, ಆದಾಯ - ಎಂಬ 6 ಪ್ರಮುಖ ಅಂಶಗಳನ್ನೊಂಡಿವೆ.

ಬಿಜೆಪಿಯ ಅಂತ್ಯೋದಯ ಧ್ಯೇಯ ಮತ್ತು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ "ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಮತ್ತು ಸಬ್ ಕಾ ಪ್ರಯಾಸ್" ಆಶಯದಂತೆ ನಮ್ಮ ಸಮಾಜದ ಕಟ್ಟಕಡೆಯ ವ್ಯಕ್ತಿಯ ಆಶೋತ್ತರಗಳನ್ನೂ ಇದು ಒಳಗೊಂಡಿದೆ.

‘ಬಿಜೆಪಿಯ ಪ್ರಜಾ ಪ್ರಣಾಳಿಕೆ’ ಯು ರಾಜ್ಯ ಎದುರಿಸುತ್ತಿರುವ ಸಾಮಾಜಿಕ-ಆರ್ಥಿಕ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿದೆ. 2019ರಿಂದ ಡಬಲ್ ಎಂಜಿನ್ ಬಿಜೆಪಿ ಸರ್ಕಾರವು ನೀಡಿದ ಉತ್ತಮ ಆಡಳಿತದಿಂದಾಗಿ ರಾಜ್ಯ ಇಂದು ಅಭಿವೃದ್ಧಿಯ ಪಥದಲ್ಲಿದೆ. 2031ರ ರಾಜ್ಯೋತ್ಸವ ಅಮೃತ ಮಹೋತ್ಸವದ ವೇಳಗೆ ಕರ್ನಾಟಕವು ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಜ್ಯ ಮತ್ತು ಒಂದು ಟ್ರಿಲಿಯನ್ ಆರ್ಥಿಕತೆ ಹೊಂದುವಂತಾಗಬೇಕು. ಜತೆಗೆ, ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಿ, ರಾಜ್ಯವು ಎದುರಿಸುತ್ತಿರುವ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸುವಂತಾಗಬೇಕು. ಅಲ್ಲದೇ, 21ನೇ ಶತಮಾನದಲ್ಲಿ ದೇಶವನ್ನು ಮುನ್ನಡೆಸುವ ರಾಜ್ಯವಾಗಿ ರೂಪುಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಕರ್ನಾಟಕದ ಜನತೆಯ ಸಂಪೂರ್ಣ ಸಹಕಾರ ಮತ್ತು ಬೆಂಬಲದೊಂದಿಗೆ ವಿಜಯನಗರ ಸಾಮ್ರಾಜ್ಯದ ವೈಭವದ ದಿನಗಳು ಮರುಕಳಿಸುವ ವಿಶ್ವಾಸ ಬಿಜೆಪಿಗಿದೆ.



ಭಾರತೀಯ ಜನತಾ ಪಾರ್ಟಿಯು ಕರ್ನಾಟಕವನ್ನು ಅಭಿವೃದ್ಧಿ, ಪ್ರಗತಿ ಮತ್ತು ಸಮೃದ್ಧಿಯತ್ತ ಮುನ್ನಡೆಸುತ್ತಿದೆ. ಕೇಂದ್ರದಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವ , ರೈತ ಬಂಧು ಶ್ರೀ ಬಿ. ಎಸ್ ಯಡಿಯೂರಪ್ಪ ಅವರ ಸೂಕ್ತ ಮಾರ್ಗದರ್ಶನ ಮತ್ತು ಕಾಮನ್ ಮ್ಯಾನ್ ಸಿಎಂ ಎಂದೇ ಜನಜನಿತರಾಗಿರುವ ಶ್ರೀ ಬಸವರಾಜ ಬೊಮ್ಮಾಯಿ ಅವರ ದಕ್ಷ ಆಡಳಿತದೊಂದಿಗೆ ಬಿಜೆಪಿಯು ಸರ್ವರ ಹಿತ ಹಾಗೂ ಸಂತುಷ್ಟ ಕರ್ನಾಟಕಕ್ಕಾಗಿ ಶ್ರಮಿಸುತ್ತಿದೆ.

ಜಗಜ್ಯೋತಿ ಬಸವೇಶ್ವರರು, ಶ್ರೀಕೃಷ್ಣದೇವರಾಯ ಮತ್ತು ಕಿತ್ತೂರು ರಾಣಿ ಚೆನ್ನಮ್ಮನಂತಹ ಮಹನೀಯರ ನಾಡು ನಮ್ಮದು. ದೇಶದ ಇತಿಹಾಸದಲ್ಲಿ ಕರ್ನಾಟಕಕ್ಕೆ ವಿಶೇಷ ಸ್ಥಾನವಿದೆ.

ಡಬಲ್ ಎಂಜಿನ್ ಬಿಜೆಪಿ ಸರ್ಕಾರ ಕಳೆದ 4 ವರ್ಷಗಳಲ್ಲಿ, ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣಕ್ಕೆ ವಿಶೇಷ ಒತ್ತು ನೀಡಿದೆ. ಕರ್ನಾಟಕವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ, ಪಿಎಂ-ಕಿಸಾನ್ ಕರ್ನಾಟಕ ಯೋಜನೆಯಡಿಯಲ್ಲಿ ರೈತರಿಗೆ ₹ 10,000, ವಿವೇಕ ಯೋಜನೆಯಡಿ 24,000 ತರಗತಿ ಕೊಠಡಿಗಳ ನಿರ್ಮಾಣ ಮತ್ತು ನಮ್ಮ ಕ್ಲಿನಿಕ್ ಗಳ ಮೂಲಕ ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆಯನ್ನು ಖಾತರಿಪಡಿಸಿದೆ.

ಬಿಜೆಪಿ ಸರ್ಕಾರವು ರಾಜ್ಯದ ಶ್ರೀಮಂತ ಪರಂಪರೆ ಮತ್ತು ಭವ್ಯ ಇತಿಹಾಸವನ್ನು ಪುನರುಜ್ಜೀವನಗೊಳಿಸಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ.

2023ರ ಚುನಾವಣೆಯಲ್ಲೂ ಬಿಜೆಪಿ ಮೇಲೆ ಭರವಸೆಯಿಟ್ಟು ನಮಗೆ ಪೂರ್ಣ ಬಹುಮತ ನೀಡಿ, ಆಶೀರ್ವದಿಸಿ ಎಂದು ನಿಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತಿದ್ದೇನೆ.

ಜೈ ಹಿಂದ್! ಜೈ ಕರ್ನಾಟಕ!

## ಶ್ರೀ ನಳಿನ್ ಕುಮಾರ್ ಕಟೀಲ್

**ಅಧ್ಯಕ್ಷರು,**
**ಬಿಜೆಪಿ ಕರ್ನಾಟಕ**



2018ರಲ್ಲಿ  ಕರುನಾಡಿನ ಜನರ ಸೇವೆ ಮಾಡುವ ಅವಕಾಶ ನಮಗೆ ಒದಗಿತ್ತು. ಆದರೆ, ನಾಡಿನ ಜನತೆ ನೀಡಿದ ಜನಾದೇಶವನ್ನು ಕಡೆಗಣಿಸಿ, ಚುನಾವಣೆಯಲ್ಲಿ ಸೋತವರು ಒಗ್ಗೂಡಿ ಸರ್ಕಾರ ರಚಿಸಿದ್ದರು. ಅದು ಹೆಚ್ಚು ಕಾಲ ಉಳಿಯಲಿಲ್ಲ.  ಹಾಗಾಗೀ, 2019ರಲ್ಲಿ ಕರ್ನಾಟಕದ ಜನರ ಆಶಯದಂತೆ ಬಿಜೆಪಿ ಸರ್ಕಾರ ಆಡಳಿತದ ಚುಕ್ಕಾಣಿ ಹಿಡಿಯಿತು. ನಿಮ್ಮ ನಿರಂತರ ಬೆಂಬಲದಿಂದಾಗಿಯೇ ಡಬಲ್ ಎಂಜಿನ್ ಬಿಜೆಪಿ ಸರ್ಕಾರವು ಹಲವು ಸಂಕಷ್ಟದ ಪರಿಸ್ಥಿತಿಯನ್ನು ನಿರಾಂತಕವಾಗಿ ಎದುರಿಸಿತು. ಕಷ್ಟಗಳನ್ನು ಮೆಟ್ಟಿ ನಿಲ್ಲುವ ಕನ್ನಡಿಗರ ದಿಟ್ಟತನದಿಂದಾಗಿಯೇ ಕರ್ನಾಟಕ ಇಂದು  ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ.

ರಾಜ್ಯದ ಮುಖ್ಯಮಂತ್ರಿಯಾಗಿ ನಾನು ಅಧಿಕಾರವಹಿಸಿಕೊಂಡಂಥ ಸಂದರ್ಭದಲ್ಲಿ  ಶ್ರೀ ಯಡಿಯೂರಪ್ಪ ಅವರ ದಕ್ಷತೆ, ದೂರದೃಷ್ಟಿಯ ನಾಯಕತ್ವದ ಗುಣಗಳೇ ನನಗೆ ದಾರಿ ದೀಪವಾಯಿತು.  ಮಹಾನ್ ಕರ್ಮಯೋಗಿ ಶ್ರೀ ನರೇಂದ್ರ ಮೋದಿ ಅವರ ಮಾರ್ಗದರ್ಶನದದಲ್ಲಿ ಹೆಜ್ಜೆಗಳನ್ನಿರಿಸಿದ್ದು , ರಾಜ್ಯವನ್ನು  ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಸಹಕಾರಿಯಾಯಿತು.

ಕಳೆದ 3.5+ ವರ್ಷಗಳಲ್ಲಿ ಡಬಲ್ ಎಂಜಿನ್ ಬಿಜೆಪಿ ಸರ್ಕಾರವು ರಾಜ್ಯ ಎದುರಿಸುತ್ತಿದ್ದ ದೀರ್ಘಕಾಲದ ಸಮಸ್ಯೆಗಳನ್ನು ಬಗೆಹರಿಸಿದೆ. ಜತೆಗೆ, ಬೃಹತ್ ಮೂಲಸೌಕರ್ಯ ಯೋಜನೆಗಳನ್ನು ಪ್ರಾರಂಭಿಸಿ, ಅವುಗಳನ್ನು  ಪೂರ್ಣಗೊಳಿಸಿದೆ.  ಸುಮಾರು 10 ಲಕ್ಷ ಕೋಟಿಯ ಹೂಡಿಕೆ ಒಪ್ಪಂದಗಳಿಗೆ ಸಹಿ ಹಾಕುವುದರ ಮೂಲಕ  55 ಲಕ್ಷ ಉದ್ಯೋಗ ಸೃಷ್ಟಿಸಲಾಗಿದೆ.

ನಮ್ಮ ಡಬಲ್ ಎಂಜಿನ್ ಬಿಜೆಪಿ ಸರ್ಕಾರವು ಅರ್ಹರಿಗೆ ಮೀಸಲಾತಿ ನೀಡಿದೆ. ವಿದ್ಯಾ ನಿಧಿ ಯೋಜನೆ ಮೂಲಕ ಬಡವರ್ಗದ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ. ಜತೆಗೆ, ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕದ ಯೋಜನೆಯಡಿ  ಎಲ್ಲರಿಗೂ ಕೈಗೆಟಕುವ ದರದಲ್ಲಿ ಗುಣಮಟ್ಟದ ವೈದ್ಯಕೀಯ ಸೇವೆಯನ್ನು ನೀಡಲಾಗುತ್ತಿದೆ. ನಮ್ಮ ರಾಜ್ಯದ  ಪ್ರತಿಯೊಬ್ಬ ವ್ಯಕ್ತಿಯೂ ಅಭಿವೃದ್ಧಿಯ ಫಲ ಪಡೆಯುವುದನ್ನು ನಮ್ಮ  ಡಬಲ್ ಇಂಜಿನ್ ಬಿಜೆಪಿ ಸರ್ಕಾರ ಖಾತ್ರಿಪಡಿಸಿದೆ.

ಈ ಅಮೃತ ಕಾಲದಲ್ಲಿ  ನವ ಕರ್ನಾಟಕ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗುವ ಮತ್ತೊಂದು ಅಪೂರ್ವ  ಅವಕಾಶ ಎದುರು ನೋಡುತ್ತಿದ್ದೇವೆ. ಈ ಕಾರ್ಯದಲ್ಲಿ  ನಮ್ಮ ಜತೆ ಹೆಗಲಿಗೆ ಹೆಗಲು ಕೊಟ್ಟು , ನೀವೂ ಹೆಜ್ಜೆ ಹಾಕುತ್ತೀರಿ ಎಂಬ  ವಿಶ್ವಾಸ ನನಗಿದೆ.

ಜೈ ಹಿಂದ್! ಜೈ ಕರ್ನಾಟಕ!




# ಶ್ರೀ ಬಸವರಾಜ ಬೊಮ್ಮಾಯಿ

**ಮುಖ್ಯಮಂತ್ರಿ,**
**ಕರ್ನಾಟಕ**



"

2023ರ ಕರ್ನಾಟಕ ವಿಧಾನಸಭೆ ಚುನಾವಣೆಗೆ ಬಿಜೆಪಿಯ ಪ್ರಣಾಳಿಕೆಯನ್ನು ನಿಮ್ಮ ಮುಂದಿಡಲು ಸಂತಸವಾಗುತ್ತಿದೆ. ಸಾಮಾನ್ಯ ಜನರಿಂದ ಆರಂಭಗೊಂಡು ಪಂಚಾಯತಿಯಿಂದ ಸಂಸತ್ತಿಗೆ ಚುನಾಯಿತರಾದ ಪ್ರತಿನಿಧಿಗಳು, ಪ್ರಬುದ್ಧರು ಮತ್ತು ಉದ್ಯಮ ಪ್ರತಿನಿಧಿಗಳು ಸೇರಿದಂತೆ ಸಮಾಜದ ವಿವಿಧ ಸ್ತರಗಳ ಜನರೊಂದಿಗೆ ಸಮಾಲೋಚನೆ ನಡೆಸಿದ ನಂತರ ಈ ಪ್ರಣಾಳಿಕೆಯನ್ನು ಸಿದ್ಧಪಡಿಸಲಾಗಿದೆ.

ಇದು ಮುಂದಿನ 25 ವರ್ಷಗಳ ಕಾಲ ಕರ್ನಾಟಕವನ್ನು ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯುವ ಭರವಸೆಯ ಅಂಶಗಳನ್ನು ಒಳಗೊಂಡಿದೆ. ಜತೆಗೆ, ಈ ಅಮೃತ ಕಾಲದ ಸಂದರ್ಭದಲ್ಲಿ ಭಾರತ ಮತ್ತು ನವ ಕರ್ನಾಟಕವನ್ನು ಅಭಿವೃದ್ಧಿಪಡಿಸುವ ಪ್ರಧಾನಿ ಮೋದಿಯವರ ಆಶಯವನ್ನು ಸಾಕಾರಗೊಳಿಸುತ್ತದೆ.

ಸಲಹಾ ಪೆಟ್ಟಿಗೆಗಳ ಮೂಲಕ ಸಂಗ್ರಹಿಸಲಾದ 6 ಲಕ್ಷಕ್ಕೂ ಹೆಚ್ಚು ಸಲಹೆಗಳು, ಪ್ರಣಾಳಿಕೆ ಸಮಿತಿ ಸದಸ್ಯರ 900 ಸಲಹೆಗಳು ಮತ್ತು 50 ವಲಯಗಳ ತಜ್ಞರಿಂದ ಪಡೆದ 250ಕ್ಕೂ ಹೆಚ್ಚು ಸಲಹೆಗಳಿಂದ ಈ ಭರವಸೆಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

ಈ ಪ್ರಕ್ರಿಯೆಯುದ್ದಕ್ಕೂ ಮೌಲ್ಯಯುತವಾದ ಮಾರ್ಗದರ್ಶನ ನೀಡಿದ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರು, ಪಕ್ಷದ ಅಧ್ಯಕ್ಷರಾದ ಶ್ರೀ ನಳಿನ್ ಕುಮಾರ್ ಕಟೀಲು ಅವರು ಮತ್ತು ನಮ್ಮ ರೈತ ಬಂಧು, ಮಾಜಿ ಮುಖ್ಯಮಂತ್ರಿ ಶ್ರೀ ಬಿ ಎಸ್ ಯಡಿಯೂರಪ್ಪ ಅವರಿಗೆ ವಿಶೇಷ ಧನ್ಯವಾದ ಹೇಳಲು ಬಯಸುತ್ತೇನೆ.

ಕರ್ನಾಟಕದ ನನ್ನೆಲ್ಲಾ ಸಹೋದರ, ಸಹೋದರಿಯರ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಿರುವ ಈ ಪ್ರಣಾಳಿಕೆಯ ಮೂಲಕ ಬಿಜೆಪಿಯು, ಕರ್ನಾಟಕವನ್ನು ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯುವ ಪ್ರತಿಜ್ಞೆ ಮಾಡುತ್ತದೆ.

"

ಜೈ ಹಿಂದ್! ಜೈ ಕರ್ನಾಟಕ!

## ಡಾ.ಕೆ.ಸುಧಾಕರ್

**ಸಂಚಾಲಕರು,**
**ಪ್ರಣಾಳಿಕೆ ಸಮಿತಿ**



# ಪ್ರಣಾಳಿಕೆ ಸಮಿತಿಯ ಸದಸ್ಯರು

## ಸಂಚಾಲಕರು

| | |
|---|---|
| **ಡಾ ।। ಕೆ. ಸುಧಾಕರ್** | **ಸಚಿವರು** |

## ಸಹ-ಸಂಚಾಲಕರು

| | |
|---|---|
| ಶ್ರೀ ಬಿ. ಸಿ. ನಾಗೇಶ್ | ಸಚಿವರು |
| ಶ್ರೀಮತಿ ತೇಜಸ್ವಿನಿ ಅನಂತಕುಮಾರ್ | ರಾಜ್ಯ ಉಪಾಧ್ಯಕ್ಷರು |
| ಶ್ರೀ ತೇಜಸ್ವಿ ಸೂರ್ಯ | ಸಂಸದರು |
| ಶ್ರೀ ಎಸ್. ಸುರೇಶ್ ಕುಮಾರ್ | ಶಾಸಕರು |
| ಶ್ರೀ ಅಭಯ್ ಪಾಟೀಲ್ | ಶಾಸಕರು |
| ಶ್ರೀ ರಾಜಕುಮಾರ್ ಪಾಟೀಲ್ ತೇಲ್ಕೂರ್ | ಶಾಸಕರು |
| ಶ್ರೀ ಎನ್. ಮಹೇಶ್ | ಶಾಸಕರು |
| ಶ್ರೀ ಪಿ. ರಾಜೀವ್ | ಶಾಸಕರು |
| ಶ್ರೀ ಕೆ. ಎಸ್. ನವೀನ್ | ವಿ.ಪ. ಸದಸ್ಯರು |
| ಡಾ ।। ಸಮೀರ್ ಕಾಗಲ್ಕರ್ | ರಾಜ್ಯ ಸಂಚಾಲಕರು, ಆರ್ಥಿಕ ಪ್ರಕೋಷ್ಠ |
| ಡಾ ।। ಪ್ರಕಾಶ್ | ಸಹ-ಸಂಚಾಲಕರು, ಪ್ರಬುದ್ಧರ ಪ್ರಕೋಷ್ಠ |
| ಶ್ರೀ ರವೀಂದ್ರ ಪೈ | ಸಹ-ಸಂಚಾಲಕರು, ವೃತ್ತಿಪರರ ಪ್ರಕೋಷ್ಠ |
| ಶ್ರೀ ವಿಶ್ವನಾಥ್ ಭಟ್ | ಮಾಜಿ ರಾಜ್ಯ ಸಂಚಾಲಕರು, ಆರ್ಥಿಕ ಪ್ರಕೋಷ್ಠ |
| ಶ್ರೀಮತಿ ಮಾಳವಿಕಾ ಅವಿನಾಶ್ | ರಾಜ್ಯ ಕಾರ್ಯಕಾರಣಿ ವಿಶೇಷ ಆಹ್ವಾನಿತರು |

# ಅತ್ಯಂತ ಪ್ರಮುಖ
# ಭರವಸೆಗಳು

## ಅನ್ನ

01



ಬಿಪಿಎಲ್ ಕುಟುಂಬಗಳಿಗೆ ಪ್ರತಿ ವರ್ಷ ಯುಗಾದಿ, ಗಣೇಶ ಚತುರ್ಥಿ ಮತ್ತು ದೀಪಾವಳಿಗೆ ತಲಾ ಒಂದರಂತೆ **3 ಅಡುಗೆ ಅನಿಲದ ಸಿಲಿಂಡರ್** ಗಳನ್ನು **ಉಚಿತ**ವಾಗಿ ವಿತರಿಸುತ್ತೇವೆ.

02



ಕೈಗೆಟುಕುವ ದರದಲ್ಲಿ ಗುಣಮಟ್ಟದ ಮತ್ತು ಆರೋಗ್ಯಕರ ಆಹಾರವನ್ನು ಒದಗಿಸಲು ರಾಜ್ಯದ ಪ್ರತಿ ಮಹಾನಗರ ಪಾಲಿಕೆಯ ವಾರ್ಡ್‌ಗಳಲ್ಲಿ **'ಅಟಲ್ ಆಹಾರ ಕೇಂದ್ರ'** ವನ್ನು ಸ್ಥಾಪಿಸುತ್ತೇವೆ.

03




**‘ಪೋಷಣೆ’ ಯೋಜನೆ**ಯ ಮೂಲಕ ಪ್ರತಿ ಬಿಪಿಎಲ್ ಕುಟುಂಬಗಳಿಗೆ **ಪ್ರತಿದಿನ ಅರ್ಧ ಲೀಟರ್ ನಂದಿನಿ ಹಾಲು ಮತ್ತು ಪ್ರತಿ ತಿಂಗಳು 5 ಕೆಜಿ ಶ್ರೀ ಅನ್ನ-ಸಿರಿಧಾನ್ಯ**ವನ್ನು ಒಳಗೊಂಡ ಪಡಿತರ ಕಿಟ್ ನೀಡುತ್ತೇವೆ.

# ಅಭಯ

04



ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಕರ್ನಾಟಕದಲ್ಲಿ **ಏಕರೂಪ ನಾಗರಿಕ ಸಂಹಿತೆ (ಯುಸಿಸಿ)** ಜಾರಿಗೊಳಿಸುತ್ತೇವೆ.

05



ರಾಜ್ಯದಾದ್ಯಂತ ನಿವೇಶನ ರಹಿತ/ ವಸತಿ ರಹಿತ ನಿವಾಸಿಗಳಿಗೆ, **‘ಸರ್ವರಿಗೂ ಸೂರು ಯೋಜನೆ’**ಯಡಿ 10 ಲಕ್ಷ ವಸತಿ ನಿವೇಶನಗಳನ್ನು ಕಂದಾಯ ಇಲಾಖೆ ಮೂಲಕ ಹಂಚಿಕೆ ಮಾಡುತ್ತೇವೆ.

06



**‘ಒನಕೆ ಓಬವ್ವ ಸಾಮಾಜಿಕ ನ್ಯಾಯ ನಿಧಿ’** ಯೋಜನೆಯನ್ನು ಪ್ರಾರಂಭಿಸುತ್ತೇವೆ. ಈ ಯೋಜನೆಯಡಿ ಎಸ್‌ಸಿ, ಎಸ್‌ಟಿ ಸಮುದಾಯದ ಮಹಿಳೆಯರು ಐದು ವರ್ಷಗಳ ಅವಧಿಗೆ ಮಾಡುವ ಸ್ಥಿರ ಠೇವಣಿಗಳ ಮೇಲೆ ₹ 10 ಸಾವಿರದವರೆಗೆ ತಾಳೆಯಾಗುವ ಠೇವಣಿ ನೀಡುತ್ತೇವೆ.


07



ಬೆಂಗಳೂರಿನ ಅಪಾರ್ಟ್‌ಮೆಂಟ್‌ಗಳಲ್ಲಿ **‘ಸುಲಲಿತ ಜೀವನ’**ಕ್ಕೆ **ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯಿದೆ** 1972ಕ್ಕೆ ಸೂಕ್ತ ತಿದ್ದುಪಡಿಗಳನ್ನು ತರುತ್ತೇವೆ ಹಾಗೂ ಕಂದುಕೊರತೆಗಳ ಪರಿಹಾರಕ್ಕೆ ಆನ್ ಲೈನ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುತ್ತೇವೆ.

# ಅಕ್ಷರ

08



**‘ವಿಶ್ವೇಶ್ವರಯ್ಯ ವಿದ್ಯಾ ಯೋಜನೆ’** ಇದರಡಿ ಸರ್ಕಾರಿ ಶಾಲೆಗಳನ್ನು **ಅತ್ಯುನ್ನತ ಶ್ರೇಣಿಗೆ ಮೇಲ್ದರ್ಜೆ**ಗೇರಿಸುವ ನಿಟ್ಟಿನಲ್ಲಿ ಪ್ರಬುದ್ಧರು ಹಾಗೂ ಸಂಸ್ಥೆಗಳ ಜತೆ ಸಹಭಾಗಿತ್ವ ಹೊಂದಲಾಗುತ್ತದೆ.

09



**‘ಸಮನ್ವಯ ಯೋಜನೆ’** ಇದರಡಿ ತ್ವರಿತಗತಿಯಲ್ಲಿ **SME ಗಳು ಮತ್ತು ITI ಗಳ ನಡುವೆ ಸಮನ್ವಯತೆ** ಸಾಧಿಸುತ್ತೇವೆ. ಪ್ರತಿಭಾವಂತ ಯುವ ವೃತ್ತಿಪರರಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಕ್ರಿಯಾತ್ಮಕ ಪರಿಸರ ವ್ಯವಸ್ಥೆಯನ್ನು ನಿರ್ಮಾಣ ಮಾಡುತ್ತೇವೆ.

10



**ಐಎಎಸ್/ಕೆಎಎಸ್/ಬ್ಯಾಂಕಿಂಗ್/ ಸರ್ಕಾರಿ ಉದ್ಯೋಗಾಕಾಂಕ್ಷಿಗಳು ತರಬೇತಿ** ಪಡೆಯಲು **ಆರ್ಥಿಕ ಪ್ರೋತ್ಸಾಹ**ವನ್ನು ನೀಡುವ ಮೂಲಕ ಮಹತ್ವಾಕಾಂಕ್ಷೆಯ ಯುವಜನರಿಗೆ ವೃತ್ತಿ ಬೆಂಬಲವನ್ನು ಒದಗಿಸುತ್ತೇವೆ.

# ಆರೋಗ್ಯ

11



**‘ಮಿಷನ್ ಸ್ವಾಸ್ಥ್ಯ ಕರ್ನಾಟಕ’**ದ ಅಡಿ ಸರ್ಕಾರಿ ಆಸ್ಪತ್ರೆ /ಆರೋಗ್ಯ ಕೇಂದ್ರಗಳಲ್ಲಿನ ಮೂಲಸೌಕರ್ಯಗಳನ್ನು ಸುಧಾರಿಸುತ್ತೇವೆ. ಮಹಾನಗರ ಪಾಲಿಕೆಯ ಪ್ರತಿ ವಾರ್ಡ್ ನಲ್ಲಿ ಲ್ಯಾಬೊರೇಟರಿ ಸೌಲಭ್ಯ ಹೊಂದಿರುವ **ನಮ್ಮ ಕ್ಲಿನಿಕ್** ಸ್ಥಾಪಿಸುತ್ತೇವೆ. ಹಾಗೂ **ಹಿರಿಯ ನಾಗರಿಕರಿಗೆ ಪ್ರತಿ ವರ್ಷ ಉಚಿತವಾಗಿ ಸಂಪೂರ್ಣ ಆರೋಗ್ಯ ತಪಾಸಣೆಯ ಸೌಲಭ್ಯ** ಕಲ್ಪಿಸುತ್ತೇವೆ.

# ಅಭಿವೃದ್ಧಿ

12



**ನಮ್ಮ ಮುಂದಿನ ಪೀಳಿಗೆಗಾಗಿ ಬೆಂಗಳೂರನ್ನು** ಅಭಿವೃದ್ಧಿಪಡಿಸಿ, ಅದನ್ನು **'ರಾಜ್ಯ ರಾಜಧಾನಿ ಪ್ರದೇಶ'** ಎಂದು ಗುರುತಿಸಲಾಗುತ್ತದೆ. **ತಂತ್ರಜ್ಞಾನ-ಆಧಾರಿತ ನಗರ ಅಭಿವೃದ್ಧಿ ಕಾರ್ಯಕ್ರಮ**ವನ್ನು ಕಾರ್ಯಗತಗೊಳಿಸುತ್ತೇವೆ. ಸುಲಲಿತ ಜೀವನಕ್ಕೆ ಅನುವುಮಾಡಿಕೊಡುವ ಸುಸಂಘಟಿತ ಸಾರಿಗೆ ಜಾಲ ಸೃಷ್ಟಿಸುತ್ತೇವೆ. ಅಲ್ಲದೇ, **ಬೆಂಗಳೂರನ್ನು ಡಿಜಿಟಲ್ ಇನ್ನೋವೇಶನ್‌ನ ಜಾಗತಿಕ ಕೇಂದ್ರವಾಗಿ ರೂಪಿಸಲು ಪೂರಕ ಪರಿಸರ ವ್ಯವಸ್ಥೆ** ಕಲ್ಪಿಸುತ್ತೇವೆ.

13



ಕರ್ನಾಟಕವನ್ನು **ಎಲೆಕ್ಟ್ರಿಕ್ ವಾಹನಗಳ ಪ್ರಮುಖ ಕೇಂದ್ರ**ವನ್ನಾಗಿ ರೂಪಿಸುತ್ತೇವೆ. ಪೂರಕವಾಗಿ, ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆ, 1,000 ಸ್ಟಾರ್ಟ್ ಅಪ್‌ಗಳಿಗೆ ಪ್ರೋತ್ಸಾಹ, ಹಾಲಿ ಇರುವ ಬಿಎಂಟಿಸಿ ಬಸ್ ಗಳನ್ನು ಎಲೆಕ್ಟ್ರಿಕ್ ಬಸ್‌ಗಳಾಗಿ ಪರಿವರ್ತಿಸುತ್ತೇವೆ. ಜತೆಗೆ ಬೆಂಗಳೂರಿನ ಹೊರವಲಯದಲ್ಲಿ ‘ಇವಿ ಸಿಟಿ’ ಅಭಿವೃದ್ಧಿ.

14



ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕಿರು ಶೀತಲೀಕರಣ ಸೌಲಭ್ಯಗಳು ಮತ್ತು ಕೃಷಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು **₹ 30,000 ಕೋಟಿ ಮೊತ್ತದ ‘ಕೆ-ಅಗ್ರಿ ಫಂಡ್’** ಸ್ಥಾಪಿಸುತ್ತೇವೆ. ಎಪಿಎಂಸಿಗಳ ಆಧುನೀಕರಣ ಮತ್ತು ಡಿಜಿಟಲೀಕರಣ ಮಾಡುತ್ತೇವೆ. ಕೃಷಿ ಯಾಂತ್ರೀಕರಣಕ್ಕೆ ಒತ್ತು ನೀಡುತ್ತೇವೆ. ಜತೆಗೆ, 5 ಹೊಸ ಕೃಷಿ ಆಧಾರಿತ ಕೈಗಾರಿಕಾ ಕ್ಲಸ್ಟರ್ ಗಳು ಮತ್ತು 3 ಹೊಸ ಆಹಾರ ಸಂಸ್ಕರಣಾ ಪಾರ್ಕ್ ಗಳನ್ನು ಸ್ಥಾಪಿಸುತ್ತೇವೆ.

# ಆದಾಯ

15



ಅತ್ಯಾಧುನಿಕ ಮೂಲಸೌಕರ್ಯಗಳನ್ನು ಒದಗಿಸಿ ಕರ್ನಾಟಕವನ್ನು ದೇಶದ ಅತ್ಯಂತ ಮೆಚ್ಚಿನ ಪ್ರವಾಸಿ ತಾಣವನ್ನಾಗಿ ರೂಪಿಸಲು **ಕಲ್ಯಾಣ ಸರ್ಕ್ಯೂಟ್, ಬನವಾಸಿ ಸರ್ಕ್ಯೂಟ್, ಪರಶುರಾಮ ಸರ್ಕ್ಯೂಟ್ ಮತ್ತು ಕಾವೇರಿ ಸರ್ಕ್ಯೂಟ್, ಗಾಣಗಾಪುರ ಕಾರಿಡಾರ್** ಅನ್ನು ಅಭಿವೃದ್ಧಿಪಡಿಸಲು **₹ 1,500 ಕೋಟಿ** ವಿನಿಯೋಗಿಸುತ್ತೇವೆ.

16



ಉತ್ಪಾದನಾ ವಲಯದಲ್ಲಿ **10 ಲಕ್ಷ ಉದ್ಯೋಗಗಳನ್ನು ಬೆಂಗಳೂರಿನ ಆಚೆ ಸೃಷ್ಟಿಸುವ ಲಾಜಿಸ್ಟಿಕ್ಸ್**, ಕೈಗಾರಿಕಾ ಕ್ಲಸ್ಟರ್‌ಗಳು, ಸಂಪರ್ಕ ಮತ್ತು ರಫ್ತು ಸೌಲಭ್ಯಗಳನ್ನು ಒಳಗೊಂಡ ಸಮಗ್ರ ಯೋಜನೆಯನ್ನು ಸಂಯೋಜಿಸುವ ಮೂಲಕ **'ಉತ್ಪಾದನಾ ಆಧರಿತ ಪ್ರೋತ್ಸಾಹ'** ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸುತ್ತೇವೆ.

ಡಬಲ್ ಎಂಜಿನ್ ಸರ್ಕಾರ

ಕರ್ನಾಟಕದ ಅಭಿವೃದ್ಧಿಯ ಸಾಕಾರ

ಈ ಬಾರಿಯ ನಿರ್ಧಾರ ಬಹುಮತದ ಬಿಜೆಪಿ ಸರ್ಕಾರ

# ಪರಿವಿಡಿ


| | | |
|---|---|---|
| A. | ಕೃಷಿ | 1-3 |
| B. | ಎಲ್ಲರನ್ನೊಳಗೊಂಡ ಅಭಿವೃದ್ಧಿ | 4-5 |
| C. | ಆರೋಗ್ಯ ಮತ್ತು ಪೋಷಣೆ | 6-7 |
| D. | ಶಿಕ್ಷಣ | 8-9 |
| E. | ಗ್ರಾಮೀಣಾಭಿವೃದ್ಧಿ | 10-11 |
| F. | ಆರ್ಥಿಕತೆ, ಕೈಗಾರಿಕೆ ಮತ್ತು ಮೂಲಸೌಕರ್ಯ | 12-13 |
| G. | ಉತ್ತಮ ಆಡಳಿತ | 14-15 |
| H. | ಮಹಿಳೆಯರು ಮತ್ತು ಮಕ್ಕಳು | 16-17 |
| I. | ಯುವಜನ ಮತ್ತು ಕ್ರೀಡೆ | 18-19 |
| J. | ಸಂಸ್ಕೃತಿ ಮತ್ತು ಪರಂಪರೆ | 20-21 |
| K. | ಬೆಂಗಳೂರು ಅಭಿವೃದ್ಧಿ | 22-25 |
| L. | ಮಧ್ಯ ಕರ್ನಾಟಕ | 26 |
| M. | ಕರಾವಳಿ ಕರ್ನಾಟಕ | 27 |
| N. | ಕಿತ್ತೂರು ಕರ್ನಾಟಕ | 28 |
| O. | ಕಲ್ಯಾಣ ಕರ್ನಾಟಕ | 29 |
| P. | ಮಲೆನಾಡು ಕರ್ನಾಟಕ | 30 |
| Q. | ಹಳೆ ಮೈಸೂರು | 31-32 |

# ಕೃಷಿ



## ಸಮಗ್ರ ಅಭಿವೃದ್ಧಿಯ ಮೂಲಕ 2027ರ ವೇಳೆಗೆ ರೈತರ ಆದಾಯ ದ್ವಿಗುಣಗೊಳಿಸುವ ಗುರಿ

# ಸಾಧನೆಗಳು

ಪಿಎಂ ಕಿಸಾನ್ ಮತ್ತು ಪಿಎಂ ಕಿಸಾನ್-ಕರ್ನಾಟಕದ ಅಡಿಯಲ್ಲಿ **54 ಲಕ್ಷ ರೈತರಿಗೆ** ತಲಾ **₹ 10,000** ಆರ್ಥಿಕ ನೆರವು ನೀಡಿದ್ದೇವೆ.

---

ರೈತರಿಗೆ ಆರೋಗ್ಯ ವಿಮೆಯನ್ನು ಒದಗಿಸಲು **ಯಶಸ್ವಿನಿ ಯೋಜನೆ**ಯನ್ನು ಪುನರ್ ರೂಪಿಸಿ **32 ಲಕ್ಷ** ಫಲಾನುಭವಿಗಳನ್ನು ಈ ಯೋಜನೆಗೆ ನೋಂದಾಯಿಸಿದ್ದೇವೆ.

**ತೊಗರಿಬೇಳೆ**ಯ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) **53%, ರಾಗಿ 138%, ಭತ್ತ 56%** ಮತ್ತು **ಹತ್ತಿ ಬೆಲೆ 60%** ಗೆ ಹೆಚ್ಚಿಸಿದ್ದೇವೆ.

---

ಕಾಂಗ್ರೆಸ್ ಸರಕಾರ 2018ರಲ್ಲಿ ಮುಚ್ಚಿದ್ದ **ಮಂಡ್ಯದ ಮೈ ಶುಗರ್ ಕಾರ್ಖಾನೆಯನ್ನು ಮತ್ತೆ ತೆರೆದಿದ್ದೇವೆ.**

---

ಕಬ್ಬಿನ ನ್ಯಾಯೋಚಿತ ಬೆಲೆಯನ್ನು ಪ್ರಧಾನಿ ಮೋದಿ ಅವರ ನೇತೃತ್ವದ ಸರ್ಕಾರ **₹ 3,050**ಕ್ಕೆ ಹೆಚ್ಚಿಸಿದೆ. ಕಾಂಗ್ರೆಸ್ ಅವಧಿಯಲ್ಲಿ ಅದು ₹ 2,100 ಇತ್ತು. ರಾಜ್ಯ ಬಿಜೆಪಿ ಸರ್ಕಾರವು ನ್ಯಾಯೋಚಿತ ಬೆಲೆಗೆ ಹೆಚ್ಚುವರಿಯಾಗಿ **₹ 100 ಸೇರಿಸಿ,** ಪ್ರತಿ ಟನ್ ಕಬ್ಬಿಗೆ **₹ 3,150** ನಿಗದಿಪಡಿಸಿದೆ.

---

**ಭದ್ರಾ ಮೇಲ್ದಂಡೆ ಯೋಜನೆ**ಗೆ 2023-24ರ ಕೇಂದ್ರ ಬಜೆಟ್‌ನಲ್ಲಿ **₹ 5,300 ಕೋಟಿ**ಗಳನ್ನು ಮೀಸಲಿಟ್ಟಿದ್ದೇವೆ.

---

**ರೈತಸಿರಿ ಯೋಜನೆ**ಯಡಿ ಸಿರಿಧಾನ್ಯ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ **₹ 10,000** ಪ್ರೋತ್ಸಾಹ ಧನ ನೀಡುತ್ತಿದ್ದೇವೆ.

---

ನೇರ ನಗದು ವರ್ಗಾವಣೆ ಮೂಲಕ **8.95 ಲಕ್ಷ** ಹೈನುಗಾರರಿಗೆ ಪ್ರೋತ್ಸಾಹಧನವಾಗಿ **₹ 1,644 ಕೋಟಿ** ನೀಡಿದ್ದೇವೆ.

# ಭರವಸೆಗಳು

**01**

ಮುಂದಿನ 5 ವರ್ಷಗಳಲ್ಲಿ **200 ಮೀನು ಕೃಷಿ ಉತ್ಪಾದನಾ ಕೇಂದ್ರ**ಗಳು ಸೇರಿದಂತೆ **1,000 ಕೃಷಿ ಉತ್ಪಾದನಾ ಕೇಂದ್ರ**ಗಳ (ಎಫ್‌ಪಿಒ) ಸ್ಥಾಪನೆ ಮಾಡುತ್ತೇವೆ. ಹೆಚ್ಚುವರಿಯಾಗಿ, ಎಫ್‌ಪಿಒಗಳಿಗೆ ಐಐಎಂನಿಂದ ಸಂಸ್ಕರಣೆ ಮತ್ತು ಮಾರ್ಕೆಟಿಂಗ್ ಬಗ್ಗೆ ಮಾರ್ಗದರ್ಶನ ನೀಡಲಾಗುವುದು.



**02**

**'ಭಗೀರಥ ಶಪಥ ಯೋಜನೆ'**ಯಡಿ ಈ ಕೆಳಕಂಡ ಕ್ರಮಗಳ ಮೂಲಕ ಸಮಗ್ರ ನೀರಾವರಿ ವ್ಯವಸ್ಥೆ ರಚನೆ:

- **ಭದ್ರಾ ಮೇಲ್ದಂಡೆ, ಕಳಸಾ ಬಂಡೂರಿ ಮತ್ತು ಕೃಷ್ಣಾ ಮೇಲ್ದಂಡೆ**ಯಂತಹ ಬಾಕಿ ಉಳಿದಿರುವ ಮತ್ತು ಎಲ್ಲಾ ಪ್ರಮುಖ ನೀರಾವರಿ ಯೋಜನೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸುತ್ತೇವೆ.
- ಅಸ್ತಿತ್ವದಲ್ಲಿರುವ ಎಲ್ಲಾ **ಏತ ನೀರಾವರಿ ಯೋಜನೆ**ಗಳನ್ನು ನೀರಾವರಿ ಕಾಲುವೆ (ಎಫ್‌ಐಸಿ)ಗಳೊಂದಿಗೆ ಶೇ. 100ರಷ್ಟು ಸಂಯೋಜಿಸುತ್ತೇವೆ.
- **ಇಸ್ರೇಲ್ ಮಾದರಿಯ ಹನಿ ನೀರಾವರಿ**ಯನ್ನು ಪ್ರಧಾನಮಂತ್ರಿ ಕೃಷಿ ಸಿಂಚಾಯೀ ಯೋಜನೆಯಡಿ ಅನುಷ್ಠಾನಗೊಳಿಸಿ ಜಮೀನುಗಳಿಗೆ ನೀರನ್ನು ತಲುಪಿಸುತ್ತೇವೆ.



**03**

**₹ 30,000 ಕೋಟಿ** ಮೊತ್ತದ 'ಕೆ-ಅಗ್ರಿ ಫಂಡ್' ಈ ಕೆಳಗಿನ ಉದ್ದೇಶಗಳಿಗೆ ಸ್ಥಾಪಿಸುತ್ತೇವೆ:

- **'ಕೃಷಿಕ ಬಂಧು ಯೋಜನೆ'**ಯಡಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕಿರು ಶೀತಲೀಕರಣ ಸೌಲಭ್ಯಗಳು (ನಂದಿನಿ ಮಾದರಿಯಲ್ಲಿ) ಮತ್ತು ಕೃಷಿ ಸಂಸ್ಕರಣಾ ಘಟಕಗಳು.
- **ಎಪಿಎಂಸಿಗಳ ಆಧುನೀಕರಣ ಮತ್ತು ಡಿಜಿಟಲೀಕರಣ.**
- ದೊಡ್ಡ ಪ್ರಮಾಣ ಹಾಗೂ ಕೈಗೆಟಕುವ ದರದ ಕೃಷಿ ಯಂತ್ರೋಪಕರಣಗಳ
- ಮೂಲಸೌಕರ್ಯ ಅಳವಡಿಕೆ.

**5 ಹೊಸ ಕೃಷಿ ಉದ್ಯಮ ಕ್ಲಸ್ಟರ್** ಮತ್ತು **3 ಹೊಸ ಆಹಾರ ಸಂಸ್ಕರಣಾ ಪಾರ್ಕ್**ಗಳ ಸ್ಥಾಪನೆ.



**04**

ರಫ್ತು ಉದ್ದೇಶದ ಸಂಗ್ರಹಣೆ ಮತ್ತು ವಿತರಣೆಗೆ ಅನುಕೂಲವಾಗುವಂತೆ ಎಲ್ಲಾ **ವಿಮಾನ ನಿಲ್ದಾಣಗಳು ಮತ್ತು ಬಂದರುಗಳ ಸಮೀಪ ಕೋಲ್ಡ್ ಸ್ಟೋರೇಜ್ ಸೌಲಭ್ಯ**ಗಳನ್ನು ಸ್ಥಾಪಿಸುತ್ತೇವೆ.



**05**

**ರಾಜ್ಯದಲ್ಲಿ ಹೈನುಗಾರಿಕೆಯನ್ನು ಉತ್ತೇಜಿಸುವ ಸಲುವಾಗಿ, ಈ ಕೆಳಗಿನ ಕ್ರಮ ಕೈಗೊಳ್ಳುತ್ತೇವೆ:**



- ಹೈನುಗಾರರಿಗೆ ನೀಡುವ **ಪ್ರೋತ್ಸಾಹಧನವನ್ನು ಪ್ರತಿ ಲೀಟರ್ ಹಾಲಿಗೆ ₹ 5ರಿಂದ ₹ 7ಕ್ಕೆ** ಹೆಚ್ಚಿಸುತ್ತೇವೆ.
- ಅನಾರೋಗ್ಯ ಪೀಡಿತ ಅಥವಾ ಗಾಯಗೊಂಡ ಜಾನುವಾರುಗಳಿಗೆ ತುರ್ತು ಚಿಕಿತ್ಸೆ ಕೊಡಿಸಲು ಪ್ರತಿ ತಾಲೂಕಿನಲ್ಲಿ **ಮೊಬೈಲ್ ಪಶು ಆರೋಗ್ಯ ಕ್ಲಿನಿಕ್** ಗಳನ್ನು ಆರಂಭಿಸುತ್ತೇವೆ.

**06**

ಸಿರಿಧಾನ್ಯ ಕೃಷಿಗೆ ಒತ್ತು ನೀಡುವ ನಿಟ್ಟಿನಲ್ಲಿ **'ಸಿರಿ ಅನ್ನದ ಮೂಲಕ ಶ್ರೀ ಸಂಪದ'** ಮಿಷನ್ ಪ್ರಾರಂಭಿಸುತ್ತೇವೆ.
ಈ ಕೆಳಗಿನ ಕ್ರಮಗಳ ಮೂಲಕ ಸಿರಿಧಾನ್ಯಗಳ ಬೇಸಾಯ ಮತ್ತು ರಫ್ತಿಗೆ ಉತ್ತೇಜನ ನೀಡುತ್ತೇವೆ:



- **'ರೈತ ಸಿರಿ ಯೋಜನೆ'**ಯಡಿ ಸಿರಿಧಾನ್ಯಗಳನ್ನು ಬೆಳೆಯುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ ನೀಡುವ **ಸಹಾಯಧನ**ವನ್ನು **₹ 10,000 ರಿಂದ ₹ 15,000**ಕ್ಕೆ ಹೆಚ್ಚಿಸುತ್ತೇವೆ.
- ರಾಜ್ಯದಲ್ಲಿ ಸಿರಿಧಾನ್ಯ ಉತ್ಪಾದನೆಗೆ ಉತ್ತೇಜನ ನೀಡಲು ಸಿರಿಧಾನ್ಯಗಳನ್ನು ಹೆಚ್ಚಾಗಿ ಬೆಳೆಯುವ ಪ್ರದೇಶಗಳಲ್ಲಿ **5 ಆಧುನಿಕ ಸಿರಿಧಾನ್ಯ ಸಂಸ್ಕರಣಾ ಘಟಕ**ಗಳನ್ನು ಸ್ಥಾಪಿಸುತ್ತೇವೆ.
- ರಾಜ್ಯದಲ್ಲಿ ಬೆಳೆಯುವ ರಾಗಿ ಮತ್ತು ಜೋಳಕ್ಕೆ **ರಾಜ್ಯ ಬ್ರ್ಯಾಂಡಿಂಗ್** ನೀಡುವ ಮೂಲಕ ಜಾಗತಿಕ ಮಾನ್ಯತೆ ತಂದು ಕೊಡಲಾಗುವುದು.

**07**

ಕೃಷಿ ಮಾರುಕಟ್ಟೆಗಳಿಗೆ ಉತ್ಪನ್ನಗಳನ್ನು ಸಾಗಿಸುವ ರೈತರಿಗೆ **ಉಚಿತ ಬಸ್ ಟಿಕೆಟ್ ಸೌಲಭ್ಯ** ಕಲ್ಪಿಸುತ್ತೇವೆ.



**08**

**ಮೀನುಗಾರರ ಹಿತಾಸಕ್ತಿಗಾಗಿ 'ಕಡಲಮಕ್ಕಳು' ಮಿಷನ್** ಪ್ರಾರಂಭಿಸಿ, ಅದರಡಿ ಮೀನುಗಾರಿಕೆ ಉತ್ಪನ್ನಗಳ ವರ್ಧಿತ ಉತ್ಪಾದನೆ, ಸಂಸ್ಕರಣೆ ಮತ್ತು ರಫ್ತಿಗೆ ಉತ್ತೇಜನ ನೀಡಲು **ಸಮಗ್ರ ಬೆಂಬಲ**



**09**

**'ಕುಸುಮ್ ಯೋಜನೆ'**ಯಡಿ ಸೋಲಾರ್ ಪಂಪ್‌ಸೆಟ್‌ಗಳನ್ನು ಬಳಸುವ **ರೈತರಿಗೆ 80% ಸಬ್ಸಿಡಿ** ನೀಡುತ್ತೇವೆ.




**10**

**₹ 500 ಕೋಟಿ** ಮೊತ್ತದ **'ಸಾವಯವ ಕೃಷಿ ಮಿಷನ್'** ಜಾರಿಗೊಳಿಸುತ್ತೇವೆ. ದೇಶಾದ್ಯಂತ ಪ್ರಮುಖ ಸ್ಥಳಗಳಲ್ಲಿ ಮಳಿಗೆಗಳನ್ನು ಸ್ಥಾಪಿಸಲು **ಕರ್ನಾಟಕ ಆರ್ಗ್ಯಾನಿಕ್ಸ್ ಬ್ರ್ಯಾಂಡ್** ಪ್ರಾರಂಭಿಸುತ್ತೇವೆ.



**11**

ಆಹಾರ ಉತ್ಪನ್ನಗಳು ಮತ್ತು ಕೃಷಿ ಉತ್ಪನ್ನಗಳ ಪ್ರಮಾಣೀಕರಣ ಮತ್ತು ಶ್ರೇಣೀಕರಣ ಪ್ರಕ್ರಿಯೆಯನ್ನು ಚುರುಕುಗೊಳಿಸಲು **ಪ್ರತಿ ಜಿಲ್ಲೆಯಲ್ಲಿ ಆಹಾರ ಪರೀಕ್ಷಾ ಪ್ರಯೋಗಾಲಯ**ವನ್ನು ಸ್ಥಾಪಿಸುತ್ತೇವೆ.



**12**

ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಮಾರುಕಟ್ಟೆ ಬೆಲೆ ಏರಿಳಿತದಿಂದ ರೈತರಿಗೆ ತೊಂದರೆಯಾಗದಂತೆ **₹ 1,000 ಕೋಟಿ** ಮೊತ್ತದ **'ಬೆಲೆ ಸ್ಥಿರೀಕರಣ ನಿಧಿ'** ಸ್ಥಾಪಿಸುತ್ತೇವೆ.



# ಎಲ್ಲರನ್ನೊಳಗೊಂಡ ಅಭಿವೃದ್ಧಿ

## ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ಪ್ರಯಾಸ್, ಸಬ್ ಕಾ ವಿಶ್ವಾಸ್



# ಸಾಧನೆಗಳು

**ರಾಜ್ಯ ಬಿಜೆಪಿ ಸರ್ಕಾರವು ಎಸ್‌ಸಿ ಮತ್ತು ಎಸ್‌ಟಿ ಸಮುದಾಯದವರ ಮೀಸಲನ್ನು ಕ್ರಮವಾಗಿ 2% ಮತ್ತು 4% ನಷ್ಟು ಹೆಚ್ಚಿಸಿದೆ ಹಾಗೂ ಎಸ್‌ಸಿ ಸಮುದಾಯದ ಒಳಮೀಸಲನ್ನು ಕಲ್ಪಿಸಿದೆ.**
ಎಸ್ ಸಿ ಬಲ - 5.50% | ಎಸ್ ಸಿ ಎಡ - 6% | ಎಸ್‌ಸಿ (ಬಂಜಾರ, ಬೋವಿ, ಕೊರಚ ಮತ್ತು ಕೊರಮ) - 4.50% | ಇತರ ದಲಿತರು - 1%

**2C ಮತ್ತು 2D** ಪ್ರವರ್ಗಗಳ ಅಡಿಯಲ್ಲಿ **ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯ**ಗಳ ಮೀಸಲಾತಿಯನ್ನು ತಲಾ 2% ಹೆಚ್ಚಿಸಿದ್ದೇವೆ.

ಡಬಲ್ ಎಂಜಿನ್ ಬಿಜೆಪಿ ಸರ್ಕಾರವು **ಬೆಟ್ಟ ಕುರುಬ (ಕಾಡು ಕುರುಬ), ಸಿದ್ದಿ, ತಳವಾರ ಮತ್ತು ಪರಿವಾರ** ಸಮುದಾಯಗಳನ್ನು ಎಸ್‌ಟಿ ಪಟ್ಟಿಗೆ ಸೇರಿಸಿದೆ.

ರಾಜ್ಯ ಬಿಜೆಪಿ ಸರ್ಕಾರವು **3,526** ದಾಖಲೆಯಿಲ್ಲದ **ಲಂಬಾಣಿ ತಾಂಡಾಗಳು ಮತ್ತು ಕುರುಬ ಹಟ್ಟಿ**ಗಳನ್ನು ಹೊಸ ಕಂದಾಯ ಗ್ರಾಮಗಳಾಗಿ ಘೋಷಿಸಿದೆ. ಜತೆಗೆ **1.75** ಲಕ್ಷಕ್ಕೂ ಹೆಚ್ಚು ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ನೀಡಿದೆ.

ರಾಜ್ಯ ಬಿಜೆಪಿ ಸರ್ಕಾರವು, **ನೇಕಾರ ಸಮ್ಮಾನ ಯೋಜನೆ**ಯಡಿ 1.5 ಲಕ್ಷಕ್ಕೂ ಹೆಚ್ಚು ನೇಕಾರರಿಗೆ ನೀಡುತ್ತಿರುವ ಧನಸಹಾಯವನ್ನು **₹ 2000 ದಿಂದ ₹ 5000**ಕ್ಕೆ ಹೆಚ್ಚಿಸಿದೆ.

2019-20ರಿಂದೀಚೆಗೆ, **ಎಸ್‌ಸಿಎಸ್‌ಪಿ** ಮತ್ತು **ಟಿಎಸ್‌ಪಿ**ಗೆ **₹ 1 ಲಕ್ಷ ಕೋಟಿ**ಗಿಂತ ಹೆಚ್ಚು ಹಣ ವಿನಿಯೋಗಿಸಿದ್ದೇವೆ. ಅದರಲ್ಲಿ ₹ **78 ಸಾವಿರ ಕೋಟಿ**ಗಳಿಗಿಂತ ಹೆಚ್ಚು ಹಣವನ್ನು ಎಸ್‌ಸಿಎಸ್‌ಪಿಗೆ ಹಾಗೂ **₹ 32 ಸಾವಿರ ಕೋಟಿ**ಗಳಿಗಿಂತ ಹೆಚ್ಚು ಹಣವನ್ನು ಟಿಎಸ್‌ಪಿಗೆ ವಿನಿಯೋಗಿಸಲಾಗಿದೆ.

ಸಂಘಟಿತ ವಲಯದ 30 ಲಕ್ಷ ಉದ್ಯೋಗಸ್ಥ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ **ಉಚಿತ ಬಸ್ ಪಾಸ್** ಘೋಷಿಸಿದ್ದೇವೆ.

# ಭರವಸೆಗಳು

**01**

ಬಿಪಿಎಲ್ ಕುಟುಂಬಗಳಿಗೆ ಪ್ರತಿ ವರ್ಷ **ಯುಗಾದಿ, ಗಣೇಶ ಚತುರ್ಥಿ ಮತ್ತು ದೀಪಾವಳಿಗೆ** ತಲಾ ಒಂದರಂತೆ **3 ಅಡುಗೆ ಅನಿಲ ಸಿಲಿಂಡರ್** ಗಳನ್ನು **ಉಚಿತ**ವಾಗಿ ವಿತರಿಸುತ್ತೇವೆ.




**02**

**5 ಲಕ್ಷ ಮನೆ**ಗಳನ್ನು ನಿರ್ಮಿಸುವ ಗುರಿಯೊಂದಿಗೆ ಕರ್ನಾಟಕದ ಎಲ್ಲಾ ಪ್ರಮುಖ ನಗರಗಳಿಗೆ **'ಬಹುಮಹಡಿ ವಸತಿ ಯೋಜನೆ'**ಯನ್ನು ವಿಸ್ತರಿಸುತ್ತೇವೆ.



**03**

ಕೈಗೆಟಕುವ ದರದಲ್ಲಿ ಗುಣಮಟ್ಟದ ಮತ್ತು ಆರೋಗ್ಯಕರ ಆಹಾರವನ್ನು ಒದಗಿಸಲು ರಾಜ್ಯದ ಮಹಾನಗರ ಪಾಲಿಕೆಯ ಪ್ರತಿ ವಾರ್ಡ್ ಗಳಲ್ಲಿ **'ಅಟಲ್ ಆಹಾರ ಕೇಂದ್ರ'** ವನ್ನು ಸ್ಥಾಪಿಸುತ್ತೇವೆ. ಡೆಲಿವರಿ ಎಕ್ಸಿಕ್ಯೂಟಿವಿ ಗಳು, ಆಟೋ- ಕ್ಯಾಬ್ ಚಾಲಕರು, ಅಸಂಘಟಿತ ವಲಯದ ಕಾರ್ಮಿಕರಿಗೆ ಇದರಿಂದ ಹೆಚ್ಚಿನ ಅನುಕೂಲವಾಗುವುದು.



**04**

**'ಪೋಷಣೆ' ಯೋಜನೆ**ಯ ಮೂಲಕ ಪ್ರತಿ ಬಿಪಿಎಲ್ ಕುಟುಂಬಗಳಿಗೆ ಪ್ರತಿದಿನ **ಅರ್ಧ ಲೀಟರ್ ನಂದಿನಿ ಹಾಲು** ಮತ್ತು ಪ್ರತಿ ತಿಂಗಳು 5 ಕೆಜಿ **ಶ್ರೀ ಅನ್ನ- ಸಿರಿಧಾನ್ಯ**ವನ್ನು ಒಳಗೊಂಡ ಪಡಿತರ ಕಿಟ್ ನೀಡುತ್ತೇವೆ.



**05**

ರಾಜ್ಯದಾದ್ಯಂತ ನಿವೇಶನ ರಹಿತ/ ವಸತಿ ರಹಿತ ನಿವಾಸಿಗಳಿಗೆ **'ಸರ್ವರಿಗೂ ಸೂರು ಯೋಜನೆ'**ಯಡಿ **10 ಲಕ್ಷ ವಸತಿ ನಿವೇಶನ**ಗಳನ್ನು ಕಂದಾಯ ಇಲಾಖೆ ಮೂಲಕ ಹಂಚಿಕೆ ಮಾಡುತ್ತೇವೆ.



**06**

ಪ್ರತಿ ವರ್ಷ 2 ಲಕ್ಷ ಮನೆಗಳ ನಿರ್ಮಾಣದೊಂದಿಗೆ **10 ಲಕ್ಷ ಮನೆ**ಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಪ್ರತಿ ಮನೆಗೆ ರಾಜ್ಯ ಸರ್ಕಾರದಿಂದ **₹ 5 ಲಕ್ಷ**ದವರೆಗಿನ ಆರ್ಥಿಕ ನೆರವು ನೀಡುತ್ತೇವೆ.



**07**

ಮಲದ ಗುಂಡಿಗೆ ಇಳಿದು ಸ್ವಚ್ಚಗೊಳಿಸುವ ಪದ್ಧತಿಯನ್ನು ನಿರ್ಮೂಲನೆ ಮಾಡಿ, **ಸಿಂಗಾಪುರ** ಮಾದರಿಯಲ್ಲಿ **ಯಾಂತ್ರೀಕರಣ ಸ್ವಚ್ಚತೆ** ವಿಧಾನವನ್ನು ಪ್ರಾಯೋಗಿಕವಾಗಿ ತುಮಕೂರು ಮತ್ತು ಹುಬ್ಬಳ್ಳಿ-ಧಾರವಾಡದಂತಹ ನಗರಗಳಲ್ಲಿ ಅನುಷ್ಠಾನಗೊಳಿಸುತ್ತೇವೆ.





**ಈ ಬಾರಿಯ ನಿರ್ಧಾರ, ಬಹುಮತದ ಬಿಜೆಪಿ ಸರ್ಕಾರ**

# ಆರೋಗ್ಯ ಮತ್ತು ಪೋಷಣೆ



ಆರೋಗ್ಯ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ಅಗ್ರಮಾನ್ಯ ಸ್ಥಾನದ ಸಂಕಲ್ಪ

## ಸಾಧನೆಗಳು

**438** ನಮ್ಮ ಕ್ಲಿನಿಕ್‌ಗಳನ್ನು ಸ್ಥಾಪಿಸುತ್ತಿದ್ದೇವೆ. ಇದು **ನಗರದ ಜನರ ಆರೋಗ್ಯ ಕವಚ**ವಾಗಲಿದೆ.

---

**ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ**ದ ಅಡಿಯಲ್ಲಿ ರಾಜ್ಯದ **1.38** ಕೋಟಿ ಜನರಿಗೆ **ಆರೋಗ್ಯ ಕಾರ್ಡ್** ನೀಡಲಾಗಿದೆ.

---

ಚಿಕ್ಕಮಗಳೂರು, ಹಾವೇರಿ, ಯಾದಗಿರಿ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ 4 ಹೊಸ **ವೈದ್ಯಕೀಯ ಕಾಲೇಜುಗಳ ಸ್ಥಾಪನೆ** ಮಾಡಿದ್ದೇವೆ.

ಕಿದ್ವಾಯಿ ಸಂಸ್ಥೆಯ ಅಡಿಯಲ್ಲಿ ಮೈಸೂರು, ಶಿವಮೊಗ್ಗ ಮತ್ತು ಕಲಬುರಗಿಯಲ್ಲಿ **₹ 202 ಕೋಟಿ** ವೆಚ್ಚದಲ್ಲಿ **ಕ್ಯಾನ್ಸರ್ ಚಿಕಿತ್ಸಾ ಕೇಂದ್ರ**ಗಳನ್ನು ಸ್ಥಾಪಿಸುತ್ತಿದ್ದೇವೆ.

---

ರಾಜ್ಯದಲ್ಲಿ **ಉಚಿತ ಡಯಾಲಿಸಿಸ್ ಚಿಕಿತ್ಸೆ** ಸೌಲಭ್ಯವನ್ನು 30,000 ಸೈಕಲ್‌ಗಳಿಂದ 60,000 ಸೈಕಲ್‌ಗಳಿಗೆ ಹೆಚ್ಚಿಸಿದ್ದೇವೆ.

---

ಕರ್ನಾಟಕದಲ್ಲಿ **1,052 ಜನೌಷಧಿ ಕೇಂದ್ರ**ಗಳನ್ನು ಸ್ಥಾಪಿಸಲಾಗಿದ್ದು , ಬಡವರಿಗೆ ಕೈಗೆಟಕುವ ದರದಲ್ಲಿ ಔಷಧಗಳು ಲಭ್ಯವಾಗುತ್ತಿವೆ.

---

2021ರಲ್ಲಿ, ಕರ್ನಾಟಕವು **8,618 ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರ**ಗಳನ್ನು ಸ್ಥಾಪಿಸಿ, ನಿಗದಿತ **7,257**ರ ಗುರಿ ಮೀರಿ ದೇಶದ ಅತ್ಯುತ್ತಮ ರಾಜ್ಯವಾಗಿ ಹೊರಹೊಮ್ಮಿದೆ.

---

ಕರ್ನಾಟಕದಲ್ಲಿ **1.15** ಕೋಟಿಗೂ ಹೆಚ್ಚು **ಬೂಸ್ಟರ್ ಡೋಸ್** ಸೇರಿದಂತೆ **12.2** ಕೋಟಿ **ಲಸಿಕೆ**ಗಳನ್ನು ನೀಡಲಾಗಿದೆ.

# ಭರವಸೆಗಳು


## 01

**ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆ** ಅಡಿಯಲ್ಲಿ ಪ್ರತಿ ಬಿಪಿಎಲ್ ಕುಟುಂಬಕ್ಕೆ ವರ್ಷಕ್ಕೆ ₹10 ಲಕ್ಷ ಪ್ರತಿ ಎಪಿಎಲ್ ಕುಟುಂಬದ ಆರೋಗ್ಯ ವಿಮೆ ಮೊತ್ತವನ್ನು ₹5 ಲಕ್ಷಕ್ಕೆ ಹೆಚ್ಚಿಸುತ್ತೇವೆ.




## 02

**ಎಲ್ಲ ತಾಲೂಕುಗಳಲ್ಲಿ ಕೀಮೋಥೆರಪಿ, ಡಯಾಲಿಸಿಸ್ ಸೇವೆ,** ಪ್ರಯೋಗಾಲಯ ಮತ್ತು ರೋಗ ನಿರ್ಣಯ ಕೇಂದ್ರಗಳ ಸೌಲಭ್ಯಗಳನ್ನು ಒದಗಿಸುತ್ತೇವೆ



## 03

ನಗರ ಪ್ರದೇಶಗಳಲ್ಲಿ ಕೈಗೆಟಕುವ ದರದಲ್ಲಿ ಗುಣಮಟ್ಟದ ಆರೋಗ್ಯ ಸೌಲಭ್ಯ ಕಲ್ಪಿಸಲು ಮುನ್ಸಿಪಲ್ ಕಾರ್ಪೋರೇಷನ್ ನ ಪ್ರತಿ ವಾರ್ಡ್ ನಲ್ಲಿ ರೋಗನಿರ್ಣಯ ಸೌಲಭ್ಯ ಹೊಂದಿರುವ **ನಮ್ಮ ಕ್ಲಿನಿಕ್** ಸ್ಥಾಪಿಸುತ್ತೇವೆ.




## 04

**'ಮಿಷನ್ ಸ್ವಾಸ್ಥ್ಯ ಕರ್ನಾಟಕ'**ದ ಅಡಿ ಸರ್ಕಾರಿ ಆಸ್ಪತ್ರೆ/ಆರೋಗ್ಯ ಕೇಂದ್ರಗಳಲ್ಲಿನ ಮೂಲಸೌಕರ್ಯ ಸುಧಾರಿಸುತ್ತೇವೆ. ಈ ನಿಟ್ಟಿನಲ್ಲಿ ಪ್ರತಿ ಜಿಲ್ಲೆಯಲ್ಲಿ **ಒಂದು ನರ್ಸಿಂಗ್ ಕಾಲೇಜು, ವೈದ್ಯಕೀಯ ಕಾಲೇಜು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ** ಸ್ಥಾಪಿಸುತ್ತೇವೆ. ಇದಲ್ಲದೇ, ಎಲ್ಲಾ ನರ್ಸಿಂಗ್ ಪದವೀಧರರ ನೋಂದಣಿಗೆ ಅನುಕೂಲವಾಗುವಂತೆ ಪ್ರತಿ ವಿಭಾಗೀಯ ಕೇಂದ್ರಗಳಲ್ಲಿ **ಕರ್ನಾಟಕ ರಾಜ್ಯ ನರ್ಸಿಂಗ್ ಕೌನ್ಸಿಲ್ ಪ್ರಾದೇಶಿಕ ಕೇಂದ್ರ**ಗಳನ್ನು ಸ್ಥಾಪಿಸುತ್ತೇವೆ.



## 05

ಪ್ರತಿ ವರ್ಷ ರಾಜ್ಯದ ಎಲ್ಲಾ **ಹಿರಿಯ ನಾಗರಿಕರಿಗೆ** ಉಚಿತವಾಗಿ ಸಂಪೂರ್ಣ **ಆರೋಗ್ಯ ತಪಾಸಣೆ**ಯ ಜತೆಗೆ ಕೈಗೆಟಕುವ ದರದಲ್ಲಿ ರೋಗ ನಿರ್ಣಯ ಸೌಲಭ್ಯವನ್ನು ಒದಗಿಸುತ್ತೇವೆ.



## 06

**'ಅನಿಮೀಯಾ- ಮುಕ್ತ ಕರ್ನಾಟಕ'** ಸಾಧಿಸಲು ರಾಜ್ಯದಲ್ಲಿ 6 ತಿಂಗಳಿಂದ 5 ವರ್ಷದೊಳಗಿನ ಮಕ್ಕಳು ಮತ್ತು ಗರ್ಭಿಣಿಯರಿಗೆ **ಐರನ್ ಫೋಲಿಕ್ ಆಸಿಡ್ ಸಪ್ಲಿಮೆಂಟ್** ಒದಗಿಸುತ್ತೇವೆ.



# ಶಿಕ್ಷಣ



## ರಾಷ್ಟ್ರೀಯ ಶಿಕ್ಷಣ ನೀತಿ
## ಜಗತ್ತಿಗೆ ನಮ್ಮ ಮಕ್ಕಳ ಸಾಮರ್ಥ್ಯ ಅನಾವರಣ

# ಸಾಧನೆಗಳು

**ನೂತನ ಶಿಕ್ಷಣ ನೀತಿಯನ್ನು ಜಾರಿಗೆ ತಂದ ಮೊದಲ ರಾಜ್ಯ, ಕರ್ನಾಟಕ.**

---

**ರಾಜ್ಯದಲ್ಲಿ ಈ ಕೆಳಗಿನ ಹೊಸ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದೇವೆ:**

- ಚಾಮರಾಜನಗರ, ಬೀದರ್, ಹಾವೇರಿ, ಹಾಸನ, ಕೊಡಗು, ಕೊಪ್ಪಳ ಮತ್ತು ಬಾಗಲಕೋಟೆಯಲ್ಲಿ **7 ಮಾದರಿ ವಿಶ್ವವಿದ್ಯಾಲಯಗಳು.**
- ರಾಯಚೂರು ಮತ್ತು ಧಾರವಾಡದಲ್ಲಿ **2 ಐಐಐಟಿ.**
- **₹ 850** ಕೋಟಿ ವೆಚ್ಚದಲ್ಲಿ **ಐಐಟಿ ಧಾರವಾಡ** ಕ್ಯಾಂಪಸ್ ನಿರ್ಮಿಸಲಾಗಿದೆ.

2021ರಲ್ಲಿ ಸರ್ಕಾರಿ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ **1.5 ಲಕ್ಷ ಟ್ಯಾಬ್ಲೆಟ್**ಗಳನ್ನು ವಿತರಿಸಿದ್ದೇವೆ. ಪ್ರೊಜೆಕ್ಟರ್, ವೈಟ್‌ಬೋರ್ಡ್, ಯುಪಿಎಸ್ ಮತ್ತು ಹೈಸ್ಪೀಡ್ ಇಂಟರ್ನೆಟ್ ಸೌಲಭ್ಯ ಒದಗಿಸುವ ಮೂಲಕ 2020-21ರಲ್ಲಿ ಪ್ರಥಮ ದರ್ಜೆ ಕಾಲೇಜಿನ **2,500** ತರಗತಿಗಳನ್ನು **ಸ್ಮಾರ್ಟ್ ತರಗತಿ**ಗಳಾಗಿ ನವೀಕರಿಸಲಾಗಿದೆ.

---

ರೈತ ವಿದ್ಯಾ ನಿಧಿ ಯೋಜನೆಯಡಿ **11** ಲಕ್ಷ ವಿದ್ಯಾರ್ಥಿಗಳಿಗೆ **₹ 725** ಕೋಟಿ ವಿದ್ಯಾರ್ಥಿ ವೇತನ ನೀಡಲಾಗಿದೆ.

---

**ವಿವೇಕ ಯೋಜನೆ**ಯಡಿ 3 ವರ್ಷಗಳಲ್ಲಿ **24,000** ಸುಸಜ್ಜಿತ ತರಗತಿ ಕೊಠಡಿಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಪ್ರಸ್ತುತ **₹ 1,194** ಕೋಟಿ ವೆಚ್ಚದಲ್ಲಿ ಸುಮಾರು **8,000** ಸುಸಜ್ಜಿತ ತರಗತಿ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ.

---

ರಾಜ್ಯಾದ್ಯಂತ **29** ಸ್ಥಳಗಳಲ್ಲಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆಗಳನ್ನು ಸ್ಥಾಪಿಸಿದ್ದೇವೆ.

# ಭರವಸೆಗಳು

01

**ಎನ್ಇಪಿ ಮಾರ್ಗಸೂಚಿ**ಗಳ ಪ್ರಕಾರ, ರಾಜ್ಯದ ಪ್ರತಿ ವಿದ್ಯಾರ್ಥಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು, ಬಜೆಟ್ ಹಂಚಿಕೆಯಲ್ಲಿ ಶಿಕ್ಷಣದ ಅನುದಾನವನ್ನು ಮೂರು ಪಟ್ಟು ಹೆಚ್ಚಿಸುತ್ತೇವೆ. ಇದು **ಜಿಎಸ್‌ಡಿಪಿಯ 6%** ನಷ್ಟಿರುತ್ತದೆ.



02

2025ರ ವೇಳೆಗೆ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆಯ ಪ್ರತಿ ಮಗು, ಅಕ್ಷರ ಮತ್ತು ಸರಳ ಗಣಿತವನ್ನು ಕಲಿಯಲು ನೆರವಾಗುವಂತ **'ಪ್ರಿ-ಕ್ಷಣ ಮಿಷನ್'** (ಪೂರ್ವ ಪ್ರಾಥಮಿಕ ಶಿಕ್ಷಣ) ಪ್ರಾರಂಭಿಸುತ್ತೇವೆ.

- ಅಸ್ತಿತ್ವದಲ್ಲಿರುವ ಎಲ್ಲಾ 65,911 ಅಂಗನವಾಡಿಗಳನ್ನು ಹೊಸ ತಲೆಮಾರಿನ 'ಸಕ್ಷಮ ಅಂಗನವಾಡಿ'ಗಳಾಗಿ ಮೇಲ್ದರ್ಜೆಗೇರಿಸುತ್ತೇವೆ.
- ಎಲ್ಲಾ ಅರ್ಹ **ಅಂಗನವಾಡಿ ಕಾರ್ಯಕರ್ತರನ್ನು ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿ**ಗಳಾಗಿ (ಎಆರ್‌ಪಿ) ಪರಿಗಣಿಸುತ್ತೇವೆ. ಪೂರ್ವ ಪ್ರಾಥಮಿಕ ವಿದ್ಯಾರ್ಥಿಗಳ ಕಲಿಕೆಗೆ ಇವರು ನೆರವಾಗಲಿದ್ದಾರೆ.




03

**ಪ್ರತಿ ಜಿಲ್ಲೆ**ಯಲ್ಲೂ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಮಾದರಿಯಲ್ಲಿ **ಕರ್ನಾಟಕ ತಂತ್ರಜ್ಞಾನ ಸಂಸ್ಥೆ** (ಕೆಐಟಿ) ಸ್ಥಾಪಿಸುತ್ತೇವೆ.



04

**ವಿಶ್ವೇಶ್ವರಯ್ಯ ವಿದ್ಯಾ ಯೋಜನೆ**ಯನ್ನು ಜಾರಿಗೆ ತರುತ್ತೇವೆ. ಈ ಯೋಜನೆಯಡಿ ಸರ್ಕಾರಿ ಶಾಲೆಗಳನ್ನು ಅತ್ಯುನ್ನತ ಶ್ರೇಣಿಗೆ ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಪ್ರಬುದ್ಧರು ಹಾಗೂ ಸಂಸ್ಥೆಗಳ ಜತೆ ಸಹಭಾಗಿತ್ವ ಹೊಂದಲಾಗುತ್ತದೆ.






# ಗ್ರಾಮೀಣಾಭಿವೃದ್ಧಿ

## ಗ್ರಾಮಗಳನ್ನು ಸಶಕ್ತಗೊಳಿಸುವ ಮೂಲಕ ಸದೃಢ ಆರ್ಥಿಕತೆ



## ಸಾಧನೆಗಳು

**ಜಲ ಜೀವನ್ ಮಿಷನ್** ಅಡಿ **₹ 9,709** ಕೋಟಿ ವೆಚ್ಚದಲ್ಲಿ **43 ಲಕ್ಷ** ಮನೆಗಳಿಗೆ ನೀರಿನ ಸಂಪರ್ಕ ನೀಡಲಾಗಿದೆ.

**ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ** ಅಡಿಯಲ್ಲಿ 2019 ಮತ್ತು 2022ರ ಅವಧಿಯಲ್ಲಿ ಸುಮಾರು **10,000** ಕಿ.ಮೀ ಗ್ರಾಮೀಣ ರಸ್ತೆಗಳನ್ನು ನಿರ್ಮಿಸಿದ್ದೇವೆ.

**ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ** ಅಡಿ 2019-20 ಮತ್ತು 2022-23ರ ನಡುವೆ 100 ಮಾನವ ದಿನಗಳ ಉದ್ಯೋಗ ಒದಗಿಸಿ, ಒಟ್ಟು **₹ 22,510** ಕೋಟಿ ಬಿಡುಗಡೆ ಮಾಡಿದ್ದೇವೆ. ಕಾರ್ಯಕ್ರಮದ ಅಡಿಯಲ್ಲಿ ಸರಾಸರಿ **43 ಲಕ್ಷ ಮಾನವ ದಿನ**ಗಳನ್ನು ಸೃಷ್ಟಿಸಲು ಸಾಧ್ಯವಾಯಿತು.

**ಬೆಳಕು ಯೋಜನೆ**ಯಡಿ **₹124** ಕೋಟಿ ವೆಚ್ಚದಲ್ಲಿ ಗ್ರಾಮೀಣ ಪ್ರದೇಶದ **2.35** ಲಕ್ಷ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಕರ್ನಾಟಕದಾದ್ಯಂತ **100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರ**ಗಳಾಗಿ ಮೇಲ್ದರ್ಜೆಗೇರಿಸುತ್ತಿದ್ದೇವೆ. **ಕಲ್ಯಾಣ ಕರ್ನಾಟಕ**ದ ಪ್ರದೇಶಗಳಲ್ಲಿ **71** ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಿರ್ಮಿಸಲಾಗುತ್ತಿದೆ.

# ಭರವಸೆಗಳು

**01**

ರಾಜ್ಯದಲ್ಲಿ ಗುರುತಿಸಲಾದ 17 ನದಿಗಳು ಮತ್ತು 500 ಕೆರೆಗಳ ಹೂಳು ತೆಗೆಯಲು ₹ 3,000 ಕೋಟಿ ನಿಧಿಯೊಂದಿಗೆ **"ಮಿಷನ್ ಒಡೆಯರ್"** ಅನುಷ್ಠಾನಗೊಳಿಸುತ್ತೇವೆ. ರಫ್ತು ಉದ್ದೇಶಕ್ಕಾಗಿ ಜಲಚರ ಸಾಕಣೆ ಕೇಂದ್ರಗಳಿಗೆ ಒತ್ತು ನೀಡುತ್ತೇವೆ.

**02**

**'ಮಿಷನ್ ಕನೆಕ್ಟ್ ಕರ್ನಾಟಕ'**ದ ಅಡಿಯಲ್ಲಿ 2025ರ ವೇಳೆಗೆ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ 'ಭಾರತ್‌ನೆಟ್' ಕಾರ್ಯಕ್ರಮದ ಅಡಿಯಲ್ಲಿ, **100 ಪ್ರತಿಶತ 5G** ಮೊಬೈಲ್ ಸಂಪರ್ಕ ಸಾಧನೆ ಮಾಡುತ್ತೇವೆ. ಜತೆಗೆ, ಹೈ ಸ್ಪೀಡ್ ಬ್ರಾಡ್‌ಬ್ಯಾಂಡ್ ಸಂಪರ್ಕ ಒದಗಿಸುತ್ತೇವೆ. ರಾಜ್ಯದಾದ್ಯಂತ **500 ವೈ-ಫೈ ಹಾಟ್‌ಸ್ಪಾಟ್** ಸೃಜಿಸುತ್ತೇವೆ.

5G

**03**

**₹ 1350 ಕೋಟಿ** ವೆಚ್ಚದಲ್ಲಿ **ಬೆಣ್ಣಿ ಹಳ್ಳ** ನದಿ ಪ್ರವಾಹ ನಿಯಂತ್ರಣ ಸೇರಿದಂತೆ **₹ 1,800 ಕೋಟಿ** ವೆಚ್ಚದಲ್ಲಿ ರಾಜ್ಯ ಮಟ್ಟದ 'ಕರ್ನಾಟಕ ಪ್ರವಾಹ ನಿಯಂತ್ರಣ ಯೋಜನೆ' ಜಾರಿಗೊಳಿಸುತ್ತೇವೆ.

> "ನಮ್ಮ ಊರಲ್ಲಿ ಉತ್ತಮ ರಸ್ತೆಗಳಾಗಿವೆ. ಗ್ರಾಮ್ ಸಡಕ್ ಯೋಜನೆಗೆ ಧನ್ಯವಾದಗಳು."

**-ಬಸಪ್ಪ**
**ರೈತ, ಧಾರವಾಡ**



# ಆರ್ಥಿಕತೆ, ಕೈಗಾರಿಕೆ ಮತ್ತು ಮೂಲಸೌಕರ್ಯ

**ಕರ್ನಾಟಕವನ್ನು 2030ರ ವೇಳೆಗೆ 1 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿ ರೂಪಿಸಿ, 75 ಲಕ್ಷ ನೇರ ಮತ್ತು ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತೇವೆ.**

## ಸಾಧನೆಗಳು

ಕರ್ನಾಟಕವು ಸತತವಾಗಿ ದಾಖಲೆ ಮಟ್ಟದಲ್ಲಿ **ಜಿಎಸ್‌ಟಿ** ಸಂಗ್ರಹಿಸಿದೆ. 2022ರ ಅಕ್ಟೋಬರ್-ಡಿಸೆಂಬರ್ ನಡುವೆ ಜಿಎಸ್‌ಟಿ ಸಂಗ್ರಹ **₹ 10,000 ಕೋಟಿ**ಗಳನ್ನು ದಾಟಿದೆ.

---

ಕರ್ನಾಟಕಕ್ಕೆ 2019ರ ಅಕ್ಟೋಬರ್ ಮತ್ತು 2022ರ ಡಿಸೆಂಬರ್ ನಡುವೆ **₹ 3.21 ಲಕ್ಷ ಕೋಟಿ ವಿದೇಶಿ ನೇರ ಹೂಡಿಕೆ** ಹರಿದುಬಂದಿದೆ.

---

2022ರಲ್ಲಿ ನಡೆದ ದಾವೋಸ್ ವಿಶ್ವ ಆರ್ಥಿಕ ವೇದಿಕೆಯಲ್ಲಿ ರಾಜ್ಯ ಬಿಜೆಪಿ ಸರ್ಕಾರವು **₹ 52,000 ಕೋಟಿ** ಮೊತ್ತದ ಹೂಡಿಕೆ ಪ್ರಸ್ತಾವನೆಗಳಿಗೆ ಸಹಿ ಹಾಕಿದೆ.

ಬೆಂಗಳೂರಿನಲ್ಲಿ 2022 ರಲ್ಲಿ ಟೆಕ್ ಸ್ಟಾರ್ಟ್‌ಅಪ್‌ಗಳಲ್ಲಿ **7.5 ಬಿಲಿಯನ್ ಡಾಲರ್** ಹೂಡಿಕೆ ಸಂಗ್ರಹಿಸಿದ್ದೇವೆ. ದೇಶದಲ್ಲಿರುವ **100 ಯುನಿಕಾರ್ನ್‌ಗಳಲ್ಲಿ 40ಕ್ಕೆ ಬೆಂಗಳೂರು** ನೆಲೆಯಾಗಿದೆ.

---

ಕಳೆದ **4 ವರ್ಷ**ಗಳಲ್ಲಿ **55 ಲಕ್ಷ ಉದ್ಯೋಗ**ಗಳನ್ನು ಸೃಷ್ಟಿಸಿದ್ದೇವೆ. ಕರ್ನಾಟಕದ **ನಿರುದ್ಯೋಗ ದರ**ವು **2.1%** ರಷ್ಟಿದೆ. ಇದು **ರಾಷ್ಟ್ರೀಯ ಸರಾಸರಿ** 4.1% ಗಿಂತ ಕಡಿಮೆಯಾಗಿದೆ.

---

**₹8,000 ಕೋಟಿ ವೆಚ್ಚದ ಬೆಂಗಳೂರು-ಮೈಸೂರು ದಶಪಥ ಎಕ್ಸ್‌ಪ್ರೆಸ್‌ವೇ** ಸಂಚಾರಕ್ಕೆ ಮುಕ್ತವಾಗಿದೆ. ಇದರಿಂದ ಎರಡು ನಗರಗಳ ನಡುವಿನ ಸಂಚಾರದ ಅವಧಿ 3 ಗಂಟೆಯಿಂದ 90 ನಿಮಿಷಕ್ಕೆ ಇಳಿಕೆಯಾಗಿದೆ.

---

ರಾಜ್ಯ ಸರ್ಕಾರದ ಬಿಯಾಂಡ್ ಬೆಂಗಳೂರು ಉಪಕ್ರಮದ ಅಡಿಯಲ್ಲಿ, **ಮೈಸೂರು, ಧಾರವಾಡ, ಮಂಗಳೂರು, ಕಲಬುರಗಿ ಮತ್ತು ಬೆಳಗಾವಿಯಲ್ಲಿ 33 ಕಂಪನಿಗಳು ಸ್ಥಾಪನೆಯಾಗಿವೆ. ಇದರಿಂದ 10,000ಕ್ಕೂ ಹೆಚ್ಚು ಜನರಿಗೆ ಉದ್ಯೋಗಾವಕಾಶಗಳು ಲಭಿಸಿವೆ.**

---

2022ರಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಭೆಯಲ್ಲಿ ಕರ್ನಾಟಕವು ಸುಮಾರು **₹ 10 ಲಕ್ಷ ಕೋಟಿ** ಮೊತ್ತದ ಹೂಡಿಕೆಯನ್ನು ಆಕರ್ಷಿಸಿದೆ. ಈ ಹೂಡಿಕೆಗಳಲ್ಲಿ 90% ರಷ್ಟು ಬೆಂಗಳೂರಿನ ಆಚೆ ಅನುಷ್ಠಾನಗೊಳ್ಳಲಿದೆ.



# ಭರವಸೆಗಳು

**01**

1 ಕೋಟಿ ರೂಪಾಯಿವರೆಗೆ ಮೇಲಾಧಾರ ಉಚಿತ ಸಾಲವನ್ನು ನೀಡಲು, ಎಂಎಸ್ಎಂಇಗಳಿಗೆ ನಾವು **ರಾಜ್ಯ ಕ್ರೆಡಿಟ್ ಗ್ಯಾರಂಟಿ ಟ್ರಸ್ಟ್** ಅನ್ನು ಪ್ರಾರಂಭಿಸುತ್ತೇವೆ.

**02**

ಪ್ರತಿ ಜಿಲ್ಲೆಯ **ಎಂಎಸ್ಎಂಇ**ಗಳಿಗೆ ಕಡಿಮೆ ಮೊತ್ತದ ಬಾಡಿಗೆಯಲ್ಲಿ ವ್ಯಾಪಾರ ಸೇವೆಗಳು ಮತ್ತು ವ್ಯವಸ್ಥಾಪನಾ ಬೆಂಬಲವನ್ನು ಒದಗಿಸಲು **'ಪ್ಲಗ್-ಅಂಡ್-ಪ್ಲೇ'** ಸೌಲಭ್ಯದ ಕೈಗಾರಿಕೆ ಕೇಂದ್ರಗಳನ್ನು ಸ್ಥಾಪಿಸುತ್ತೇವೆ.

**03**

ಉದಯೋನ್ಮುಖ ವಲಯಗಳಲ್ಲಿ ಸ್ಟಾರ್ಟ್ ಅಪ್‌ಗಳಿಗಾಗಿ **₹5,000 ಕೋಟಿ ಫಂಡ್**ಗಳನ್ನು ಸ್ಥಾಪಿಸುತ್ತೇವೆ.

**04**

**ಕನ್ನಡ ಚಿತ್ರೋದ್ಯಮಕ್ಕೆ 'ಉದ್ಯಮ ಸ್ಥಾನಮಾನ'** ನೀಡುತ್ತೇವೆ. ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ದೇಶದ ಅತಿದೊಡ್ಡ **'ಪುನೀತ್ ರಾಜಕುಮಾರ್ ಫಿಲ್ಮ್ ಸಿಟಿ'** ಯನ್ನು ಸ್ಥಾಪಿಸುತ್ತೇವೆ.

**05**

ಉತ್ಪಾದನಾ ವಲಯದಲ್ಲಿ **10 ಲಕ್ಷ ಉದ್ಯೋಗಗಳನ್ನು ಸೃಷ್ಟಿ**ಸುವ ಲಾಜಿಸ್ಟಿಕ್ಸ್, ಕೈಗಾರಿಕಾ ಕ್ಲಸ್ಟರ್‌ಗಳು, ಸಂಪರ್ಕ ಮತ್ತು ರಫ್ತು ಸೌಲಭ್ಯಗಳನ್ನು ಒಳಗೊಂಡ ಸಮಗ್ರ ಯೋಜನೆಯನ್ನು ಸಂಯೋಜಿಸುವ ಮೂಲಕ **'ಉತ್ಪಾದನಾ ಆಧರಿತ ಪ್ರೋತ್ಸಾಹ ಯೋಜನೆ'**ಯ ವ್ಯಾಪ್ತಿಯನ್ನು ವಿಸ್ತರಿಸುತ್ತೇವೆ.

**06**

**'ಮಿಷನ್ ಕನೆಕ್ಟ್ ಕರ್ನಾಟಕ'**ದ ಅಡಿಯಲ್ಲಿ ಎಲ್ಲರಿಗೂ ಕೈಗೆಟಕುವ ದರದಲ್ಲಿ ಆರಾಮದಾಯಕ ಮತ್ತು ಸುರಕ್ಷಿತ ರೈಲು ಸಂಪರ್ಕಕ್ಕಾಗಿ ಮೈಸೂರು, ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿಯಲ್ಲಿ **ಮೆಟ್ರೋ ರೈಲು ಮಾರ್ಗ** ಸ್ಥಾಪಿಸುತ್ತೇವೆ.

**07**

ಪಳೆಯುಳಿಕೆ ಇಂಧನಕ್ಕೆ ಪರ್ಯಾಯವಾಗಿ ಹಸಿರು ಹೈಡ್ರೋಜನ್ ಉತ್ಪಾದಿಸಲು ಐಐಎಸ್‌ಸಿ, ಐಐಎಸ್ಇಒಆರ್ ಮತ್ತು ಐಐಟಿ ಹಾಗೂ ಇತರೆ ಪ್ರಮುಖ ಸಂಸ್ಥೆಗಳ ಸಹಯೋಗದಲ್ಲಿ **'ರಾಷ್ಟ್ರೀಯ ಹೈಡ್ರೋಜನ್ ಮಿಷನ್'** ಪ್ರಾರಂಭಿಸುತ್ತೇವೆ. ದೇಶದಲ್ಲಿ ಹಸಿರು ಹೈಡ್ರೋಜನ್ ಉತ್ಪಾದನೆ ಮತ್ತು ರಫ್ತಿನಲ್ಲಿ ಕರ್ನಾಟಕವನ್ನು ಪ್ರಮುಖ ರಾಜ್ಯವನ್ನಾಗಿ ಮಾಡುತ್ತೇವೆ.

**08**

**'ಇವಿ ಭರವಸೆ':** "ಮಿಷನ್ ಕನೆಕ್ಟ್ ಕರ್ನಾಟಕ"ದ ಅಡಿಯಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಆಶಯದಂತೆ ಶೂನ್ಯ ಇಂಗಾಲದ ಹೊರಸೂಸುವಿಕೆಯ ಗುರಿಯನ್ನು ಈ ಕೆಳಗಿನ ವಿಧಾನಗಳಲ್ಲಿ ಸಾಧಿಸುವ ಮೂಲಕ ಕರ್ನಾಟಕವನ್ನು ಎಲೆಕ್ಟ್ರಿಕ್ ವಾಹನಗಳ ಪ್ರಮುಖ ಕೇಂದ್ರವನ್ನಾಗಿ ರೂಪಿಸುತ್ತೇವೆ:

- ಬೆಂಗಳೂರಿನ ಹೊರವಲಯದಲ್ಲಿ **'ಇವಿ ಸಿಟಿ'** ಅಭಿವೃದ್ಧಿ
- **ಫಾರ್ಮುಲಾ-ಇ ಸರ್ಕ್ಯೂಟ್**ನ ಅಭಿವೃದ್ಧಿ
- **ನೋಂದಣಿ ಶುಲ್ಕ** ಮತ್ತು **ರಸ್ತೆ ತೆರಿಗೆ ವಿನಾಯಿತಿ**
- ಮೊದಲ **1,000 ಸ್ಟಾರ್ಟ್‌ಅಪ್**ಗಳಿಗೆ ಪ್ರೋತ್ಸಾಹ
- ರಾಜ್ಯಾದ್ಯಂತ **ಇವಿ ಚಾರ್ಜಿಂಗ್ ಸ್ಟೇಷನ್**ಗಳ ಸ್ಥಾಪನೆ.
- ಹಾಲಿ ಇರುವ **ಬಿಎಂಟಿಸಿ ಬಸ್**ಗಳನ್ನು **ಎಲೆಕ್ಟ್ರಿಕ್ ಬಸ್**ಗಳಾಗಿ ಪರಿವರ್ತಿಸುತ್ತೇವೆ.

# ಉತ್ತಮ ಆಡಳಿತ

## ಕನಿಷ್ಠ ಸರ್ಕಾರ ಮತ್ತು ಗರಿಷ್ಠ ಆಡಳಿತದ ಭರವಸೆಯೊಂದಿಗೆ ಸುಭದ್ರ ಮತ್ತು ಸುರಕ್ಷಿತ ಕರ್ನಾಟಕದ ಖಾತ್ರಿ ನಮ್ಮದು



# ಸಾಧನೆಗಳು

ಕರ್ನಾಟಕದಾದ್ಯಂತ 7,363 ಗ್ರಾಮ ಒನ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ರಾಜ್ಯಾದ್ಯಂತ 1.5 ಕೋಟಿ ಗ್ರಾಮೀಣ ಜನರಿಗೆ ಸಾರ್ವಜನಿಕ ಸೇವೆಗಳನ್ನು ಒದಗಿಸಲಾಗಿದೆ.

---

100 ಇಲಾಖೆಗಳಾದ್ಯಂತ ಸುಮಾರು 1,200 ಸರ್ಕಾರಿ ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸಲು 'ಕರ್ನಾಟಕ ಸಕಾಲ ಸೇವೆಗಳ ಕಾಯಿದೆ, 2011' ಅನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದೇವೆ.

ಪಿಎಫ್‌ಐ ಮತ್ತು ಇತರ ಜಿಹಾದಿ ಸಂಘಟನೆಗಳನ್ನು ನಿಷೇಧಿಸಿದ್ದೇವೆ. ಪೂರಕವಾಗಿ 14,000 ಸಿಬ್ಬಂದಿ ನೇಮಕದೊಂದಿಗೆ ಪೊಲೀಸ್ ಇಲಾಖೆಯನ್ನು ಬಲಪಡಿಸಿದ್ದೇವೆ.

---

ವಿವಿಧ ಸೂಚ್ಯಂಕಗಳು ಮತ್ತು ಸೂಚಕಗಳಲ್ಲಿ ಕರ್ನಾಟಕದ ಶ್ರೇಯಾಂಕಗಳನ್ನು ಸುಧಾರಿಸಿದ್ದೇವೆ:

- ಈಸ್ ಆಫ್ ಡೂಯಿಂಗ್ ಬಿಸಿನೆಸ್ ಇಂಡೆಕ್ಸ್ 2021 ಮತ್ತು 2022ರಲ್ಲಿ ನಾವು ನಂ.1 ಸ್ಥಾನದಲ್ಲಿದ್ದೇವೆ. 2017ರ ಕಾಂಗ್ರೆಸ್ ಅವಧಿಯಲ್ಲಿ ರಾಜ್ಯ 8ನೇ ಸ್ಥಾನದಲ್ಲಿತ್ತು.
- ಡಿಪಿಐಐಟಿಯ 'ಸ್ಟೇಟ್ ಸ್ಟಾರ್ಟ್-ಅಪ್ ವರದಿ 2021'ರ ಪ್ರಕಾರ ಉದಯೋನ್ಮುಖ ಉದ್ಯಮಿಗಳಿಗಾಗಿ ಸ್ಟಾರ್ಟ್-ಅಪ್ ಪರಿಸರ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಲು ದೇಶದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ರಾಜ್ಯಗಳ ಪೈಕಿ ಕರ್ನಾಟಕವೂ ಒಂದಾಗಿದೆ.
- ನೀತಿ ಆಯೋಗ ಬಿಡುಗಡೆ ಮಾಡಿದ 'ಇಂಡಿಯಾ ಇನ್ನೋವೇಷನ್ ಇಂಡೆಕ್ಸ್' ಪ್ರಕಾರ ಸತತ 3 ವರ್ಷಗಳ ಕಾಲ ದೇಶದ ಪ್ರಮುಖ ರಾಜ್ಯಗಳ ಪೈಕಿ ಕರ್ನಾಟಕವು ಆವಿಷ್ಕಾರದಲ್ಲಿ ಅಗ್ರ ಗಣ್ಯ ಸ್ಥಾನ ಪಡೆದಿದೆ.

---

'ಇ-ಪಂಚಾಯತ್ ಪುರಸ್ಕಾರ 2022'ರಲ್ಲಿ ಪ್ರಥಮ ಬಹುಮಾನ ಪಡೆದಿರುವ ಕರ್ನಾಟಕವು ಉತ್ತಮ ಆಡಳಿತ ನೀಡಿರುವ ಅತ್ಯುತ್ತಮ ರಾಜ್ಯವೆಂದು ನಿರ್ಣಯಿಸಲಾಗಿದೆ.



# ಭರವಸೆಗಳು

**01**

ಉನ್ನತ ಮಟ್ಟದ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಕರ್ನಾಟಕದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ)ಯನ್ನು ಜಾರಿಗೊಳಿಸುತ್ತೇವೆ.



**02**

ಕರ್ನಾಟಕದಲ್ಲಿ ರಾಷ್ಟ್ರೀಯ ನಾಗರಿಕರ ನೋಂದಣಿ ಪ್ರಕ್ರಿಯೆ ಚುರುಕುಗೊಳಿಸಿ ಎಲ್ಲಾ ಅಕ್ರಮ ವಲಸಿಗರನ್ನು ಗಡಿಪಾರು ಮಾಡುತ್ತೇವೆ.

**03**

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಡಿ, 'ಕರ್ನಾಟಕ - ಧಾರ್ಮಿಕ ಮೂಲಭೂತವಾದ ಮತ್ತು ಭಯೋತ್ಪಾದನೆ ತಡೆ ದಳ' (ಕೆ-ಸ್ವಿಫ್ಟ್) ಎಂಬ ವಿಶೇಷ ಪಡೆ ರಚಿಸುತ್ತೇವೆ.



**04**

ಸರ್ಕಾರಿ ಗುತ್ತಿಗೆದಾರರಿಗೆ ಸಕಾಲದಲ್ಲಿ ಹಣ ಪಾವತಿ ಮಾಡಲು, ಕಾರ್ಯಾದೇಶವನ್ನು ನೀಡಿದ ನಂತರ ಎಸ್ಕ್ರೋ ಖಾತೆಯಲ್ಲಿ ಹಣ ಜಮೆ ಮಾಡುತ್ತೇವೆ. ಗುಣಮಟ್ಟ ನಿಯಂತ್ರಣ ಸಮಿತಿಯು ಪ್ರಮಾಣೀಕರಿಸಿದ ನಂತರ ಹಣ ಬಿಡುಗಡೆ ಮಾಡಲಾಗುತ್ತದೆ.




**05**

ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ಮಂಜೂರಾದ 100% ಹುದ್ದೆಗಳನ್ನು ಪರಿಷ್ಕೃತ ಮೀಸಲಾತಿ ಮೆಟ್ರಿಕ್ ಆಧಾರದ ಮೇಲೆ ಭರ್ತಿ ಮಾಡುತ್ತೇವೆ.



**06**

ನಾಗರಿಕ ಸೇವೆಗಳ ಸಾಮರ್ಥ್ಯ ಹೆಚ್ಚಿಸುವ ರಾಷ್ಟ್ರೀಯ ಕಾರ್ಯಕ್ರಮವಾದ 'ಮಿಷನ್ ಕರ್ಮ ಯೋಗಿ' ಮಾದರಿಯಲ್ಲೇ, ರಾಜ್ಯದಲ್ಲಿ 'ಮಿಷನ್ ಕಾಯಕ ಯೋಗಿ'ಯನ್ನು ಜಾರಿಗೊಳಿಸುತ್ತೇವೆ. ಈ ಮೂಲಕ ನಾಗರಿಕ ಕೇಂದ್ರಿತ ಸೇವೆಗಳನ್ನು ಒದಗಿಸಲು ಭವಿಷ್ಯದ ಸರ್ಕಾರಿ ನೌಕರರನ್ನು ಸಜ್ಜುಗೊಳಿಸುತ್ತೇವೆ.



**07**

ಕರ್ನಾಟಕದ ಅರಣ್ಯ ಪ್ರದೇಶವನ್ನು ವರ್ಷಕ್ಕೆ 2 ಪ್ರತಿಶತದಷ್ಟು ಹೆಚ್ಚಿಸುವ 'ಅರಣ್ಯೀಕರಣ- ಅರಣ್ಯ ಕವಚ ವರ್ಧನೆ ಯೋಜನೆ'ಯನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸುತ್ತೇವೆ. ಈ ಮೂಲಕ ರಾಜ್ಯದ CAMPA ನಿಧಿಯ 100% ಬಳಕೆಯನ್ನು ಖಾತ್ರಿಪಡಿಸುತ್ತೇವೆ.



# ಮಹಿಳಾ ಮತ್ತು ಮಕ್ಕಳು

## ಸಮಾನತೆ, ಅವಕಾಶ ಮತ್ತು ಘನತೆಯೊಂದಿಗೆ ಮಹಿಳೆಯರ ಮುಂದಾಳತ್ವದಲ್ಲಿ ಅಭಿವೃದ್ಧಿ

# ಸಾಧನೆಗಳು

ರಾಜ್ಯದಲ್ಲಿ 'ಉಜ್ವಲ ಯೋಜನೆ' ಅಡಿ 37 ಲಕ್ಷ ಉಚಿತ ಎಲ್‌ಪಿಜಿ ಸಂಪರ್ಕ ನೀಡಿದ್ದೇವೆ.

'ಮಿಷನ್ ಇಂದ್ರ ಧನುಷ್ ಲಸಿಕೆ' ಮೂಲಕ 10 ಲಕ್ಷ ಮಕ್ಕಳು, 2ಲಕ್ಷ ಗರ್ಭಿಣಿಯರ ರೋಗ ನಿರೋಧಕತೆಯನ್ನು ಹೆಚ್ಚಿಸಿದ್ದೇವೆ.



2023-24ನೇ ಸಾಲಿನಲ್ಲಿ ಸಂಘಟಿತ ವಲಯದ 30 ಲಕ್ಷ ಉದ್ಯೋಗಸ್ಥ ಮಹಿಳೆಯರಿಗೆ ಉಚಿತ ಬಸ್ ಪಾಸ್ ನೀಡಲು ₹ 1 ಸಾವಿರ ಕೋಟಿ ಮತ್ತು ವಿದ್ಯಾ ವಾಹಿನಿ ಯೋಜನೆ ಅಡಿ ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್ ನೀಡಲು ₹ 350 ಕೋಟಿ ಹಂಚಿಕೆ ಮಾಡಿದ್ದೇವೆ.

ರಾಜ್ಯದಲ್ಲಿ ಇದುವರೆಗೆ 9.35 ಲಕ್ಷ ಮಹಿಳೆಯರು 'ಮಾತೃಪೂರ್ಣ ಯೋಜನೆ'ಯ ಪ್ರಯೋಜನ ಪಡೆದಿದ್ದಾರೆ.

'ಅಮೃತ್ ಸ್ವಸಹಾಯ ಮೈಕ್ರೋ ಎಂಟರ್‌ಪ್ರೈಸಸ್' ಯೋಜನೆಯಡಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ₹ 500 ಕೋಟಿ ನಿಧಿ ಸ್ಥಾಪಿಸಿದ್ದೇವೆ. ಇದರಿಂದ 3.9 ಲಕ್ಷ ಮಹಿಳೆಯರಿಗೆ ನೆರವಾಗಲಿದೆ.

'ಮುದ್ರಾ ಯೋಜನೆ'ಯಡಿ ಸಾಲದ ಶೇ.71ರಷ್ಟನ್ನು ರಾಜ್ಯದ ಮಹಿಳಾ ಉದ್ಯಮಿಗಳಿಗೆ ನೀಡಿದ್ದೇವೆ.

2021-22ನೇ ಸಾಲಿನಲ್ಲಿ 'ಭಾಗ್ಯಲಕ್ಷ್ಮಿ ಯೋಜನೆ'ಯ 3 ಲಕ್ಷ ಫಲಾನುಭವಿಗಳ ಖಾತೆಗಳಿಗೆ ₹ 97 ಕೋಟಿ ಜಮೆ ಮಾಡಿದ್ದೇವೆ.

ರಾಜ್ಯದಲ್ಲಿ ಇದುವರೆಗೆ 9.35 ಲಕ್ಷ ಮಹಿಳೆಯರು ಮಾತೃಪೂರ್ಣ ಯೋಜನೆಯ ಪ್ರಯೋಜನ ಪಡೆದಿದ್ದಾರೆ.

# ಭರವಸೆಗಳು

**01**

ಪ್ರತಿ ಜಿಲ್ಲೆಯಲ್ಲಿ ಕೈಗಾರಿಕಾ ಕ್ಲಸ್ಟರ್‌ಗಳನ್ನು ಸ್ಥಾಪಿಸುತ್ತೇವೆ. ಆ ಕ್ಲಸ್ಟರ್‌ಗಳಲ್ಲಿ ಮಹಿಳಾ ನೇತೃತ್ವದ ಉದ್ಯಮಗಳಿಗೆ ವಿಜಿಎಫ್‌ನಂತೆ ₹ 500 ಕೋಟಿ ಆವರ್ತ ನಿಧಿ ಸ್ಥಾಪಿಸುತ್ತೇವೆ.



**02**

ಹುಬ್ಬಳ್ಳಿ, ಬೆಳಗಾವಿ, ಕಲಬುರಗಿ, ಮೈಸೂರು, ಮಂಗಳೂರು, ತುಮಕೂರು ಮತ್ತು ದಾವಣಗೆರೆಯಲ್ಲಿ ಉದ್ಯೋಗಸ್ಥ ಮಹಿಳೆಯರು ಮತ್ತು ವಿದ್ಯಾರ್ಥಿನಿಯರಿಗೆ ಪಿಪಿಪಿ ಮಾದರಿಯಲ್ಲಿ ಹಾಸ್ಟೆಲ್‌ಗಳನ್ನು ಸ್ಥಾಪಿಸುತ್ತೇವೆ.



**03**

ಗರ್ಭಿಣಿಯರಿಗೆ 'ಸುರಕ್ಷಾ ಜನನಿ ಭರವಸೆ ಕಿಟ್' ವಿತರಿಸುತ್ತೇವೆ.
6 ಪೌಷ್ಠಿಕಾಂಶಗಳ ಕಿಟ್ ₹ 21,000 ಮೌಲ್ಯದ್ದಾಗಿದ್ದು, ಆರ್ಥಿಕ ನೆರವನ್ನೂ ಒಳಗೊಂಡಿರಲಿದೆ.



**04**

'ವಿಧವೆಯರ ಮಾಸಿಕ ಪಿಂಚಣಿ'ಯನ್ನು ₹ 800ರಿಂದ ₹2,000ಕ್ಕೆ ಹೆಚ್ಚಿಸುತ್ತೇವೆ.



**05**

ಸಾರ್ವಜನಿಕ ಸಹಭಾಗಿತ್ವದ ಎಲ್ಲಾ ಕೈಗಾರಿಕಾ ಕ್ಲಸ್ಟರ್‌ಗಳಲ್ಲಿ ಶಿಶುವಿಹಾರಗಳನ್ನು ಕಡ್ಡಾಯವಾಗಿ ತೆರೆಯುತ್ತೇವೆ.



**06**

'ಒನಕೆ ಓಬವ್ವ ಸಾಮಾಜಿಕ ನ್ಯಾಯ ನಿಧಿ ಯೋಜನೆ'ಯನ್ನು ಪ್ರಾರಂಭಿಸುತ್ತೇವೆ.
ಈ ಯೋಜನೆಯಡಿ ಎಸ್‌ಸಿ, ಎಸ್‌ಟಿ ಸಮುದಾಯದ ಮಹಿಳೆಯರು 5 ವರ್ಷಗಳ ಅವಧಿಗೆ ಮಾಡುವ ಸ್ಥಿರ ಠೇವಣಿಗಳ ಮೇಲೆ ₹ 10 ಸಾವಿರದವರೆಗೆ ತಾಳೆಯಾಗುವ ಠೇವಣಿ ನೀಡುತ್ತೇವೆ.





# ಯುವಜನ ಮತ್ತು ಕ್ರೀಡೆ

## ಭರವಸೆಯ ನಾಳೆಗಾಗಿ ರಾಜ್ಯದ ಯುವ ಜನರ ಏಳಿಗೆಗೆ ಕಟಿಬದ್ಧ



# ಸಾಧನೆಗಳು

ಗ್ರಾಮೀಣ ಭಾಗದಲ್ಲಿ ಯುವಜನರು ಸ್ವಯಂ ಉದ್ಯೋಗ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಪ್ರೋತ್ಸಾಹಿಸಲು **'ಸ್ವಾಮಿ ವಿವೇಕಾನಂದ ಯುವ ಶಕ್ತಿ ಯೋಜನೆ'** ಅಡಿಯಲ್ಲಿ **27,395 ಸ್ವಸಹಾಯ ಗುಂಪು**ಗಳನ್ನು ಸ್ಥಾಪಿಸಲಾಗುತ್ತಿದೆ.

---

ವಿಶೇಷ ಉದ್ಯೋಗ ನೀತಿಯ ಮೂಲಕ ಕಳೆದ **4 ವರ್ಷ**ಗಳಲ್ಲಿ **55 ಲಕ್ಷ ಉದ್ಯೋಗ**ಗಳನ್ನು ಸೃಷ್ಟಿಸಿದ್ದೇವೆ.

---

**ಭಾರತೀಯ ಸೇನೆಯಲ್ಲಿ ಅಗ್ನಿವೀರ**ರಾಗಿ ನೇಮಕಗೊಳ್ಳಲು **ಎಸ್‌ಸಿ, ಎಸ್‌ಟಿ** ಮತ್ತು **ಹಿಂದುಳಿದ ವರ್ಗ**ಗಳ **10,000** ಯುವಜನರಿಗೆ ಉಚಿತ ತರಬೇತಿ ನೀಡಲು ಬದ್ಧರಾಗಿದ್ದೇವೆ.

2022ರ ಡಿಸೆಂಬರ್‌ನಲ್ಲಿ ರಾಜ್ಯದ **10,000 ಯುವಜನರಿಗೆ ಉದ್ಯೋಗ ಪತ್ರ**ಗಳನ್ನು ಒದಗಿಸಿದ್ದು, ಹೆಚ್ಚಿನವರು **₹ 18,000 ದಿಂದ ₹ 45,000**ವರೆಗಿನ ಆರಂಭಿಕ ಮಾಸಿಕ ವೇತನ ಪಡೆಯುತ್ತಿದ್ದಾರೆ.

---

**ಕರ್ನಾಟಕದ ಯುವಜನರ ಕೌಶಲ್ಯಕ್ಕೆ ಅಗತ್ಯವಾದ ತರಬೇತಿ, ಪ್ರೋತ್ಸಾಹ ಒದಗಿಸಿದ್ದೇವೆ:**

- ಮಹತ್ವಾಕಾಂಕ್ಷೆಯ **'ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ'**ಯಡಿ ಕರ್ನಾಟಕದಲ್ಲಿ **5.5 ಲಕ್ಷ**ಕ್ಕೂ ಹೆಚ್ಚು ಯುವಜನರಿಗೆ ತರಬೇತಿ ನೀಡಲಾಗಿದೆ. ಅದರಲ್ಲಿ **4.4 ಲಕ್ಷ ಅಭ್ಯರ್ಥಿ**ಗಳು ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿ, ಪ್ರಮಾಣಪತ್ರ ಪಡೆದಿದ್ದಾರೆ.
- **'ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ'** ಅಡಿಯಲ್ಲಿ **25,000**ಕ್ಕೂ ಹೆಚ್ಚು ಯುವಜನರಿಗೆ ತರಬೇತಿ ನೀಡಲಾಗಿದೆ. ಈ ತರಬೇತಿ ಪಡೆದವರ ಪೈಕಿ 83% ಗಿಂತ ಹೆಚ್ಚು ಜನರು (2022ರ ನವೆಂಬರ್ ವರೆಗೆ) ಉದ್ಯೋಗ ಪಡೆದಿದ್ದಾರೆ.
- **KGTTI**ಗಳ ಮೂಲಕ **25,000** ಅಭ್ಯರ್ಥಿಗಳಿಗೆ ಕೌಶಲ್ಯ-ನಿರ್ದಿಷ್ಟ ತಾಂತ್ರಿಕ ತರಬೇತಿಯನ್ನು ಒದಗಿಸಲಾಗಿದೆ.

---

ಬೆಂಗಳೂರಿನಲ್ಲಿ ಆಯೋಜಿಸಲಾದ **'2022 ಖೇಲೋ ಇಂಡಿಯಾ'** ವಿಶ್ವವಿದ್ಯಾಲಯದ ಕ್ರೀಡಾಕೂಟದಲ್ಲಿ 200 ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳಿಂದ **4,000**ಕ್ಕೂ ಹೆಚ್ಚು ಕ್ರೀಡಾಪಟುಗಳು 20 ವಿವಿಧ ಕ್ರೀಡಾ ವಿಭಾಗಗಳಲ್ಲಿ ಭಾಗವಹಿಸಿದ್ದರು.

# ಭರವಸೆಗಳು

**01**

**'ಸಮನ್ವಯ ಯೋಜನೆ'** ಅಡಿ, ತ್ವರಿತಗತಿಯಲ್ಲಿ **SME** ಗಳು ಮತ್ತು **ITI** ಗಳ ನಡುವೆ ಸಮನ್ವಯತೆ ಸಾಧಿಸುತ್ತೇವೆ. ಪ್ರತಿಭಾವಂತ ಯುವ ವೃತ್ತಿಪರರಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಕ್ರಿಯಾತ್ಮಕ ಪರಿಸರ ವ್ಯವಸ್ಥೆಯನ್ನು ನಿರ್ಮಾಣ ಮಾಡುತ್ತೇವೆ.



**02**

**ಮಹತ್ವಾಕಾಂಕ್ಷೆಯ ಯುವಜನರಿಗೆ ಈ ಬೆಂಬಲಗಳನ್ನು ಒದಗಿಸುತ್ತೇವೆ:**

- **ಐಎಎಸ್/ಕೆಎಎಸ್/ಬ್ಯಾಂಕಿಂಗ್/ ಸರ್ಕಾರಿ ಉದ್ಯೋಗ**ದ ಪರೀಕ್ಷೆಗಳಿಗೆ ಕೋಚಿಂಗ್ ಪಡೆಯಲು ಧನ ಸಹಾಯ ಒದಗಿಸುತ್ತೇವೆ.
- ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳಿಗೆ ಹಾಜರಾಗಲು ಪರಸ್ಥಳಗಳಿಗೆ ತೆರಳುವ ಎಲ್ಲಾ ಅಭ್ಯರ್ಥಿಗಳಿಗೆ **ಉಚಿತ ಬಸ್ ಪ್ರಯಾಣ ಸೌಲಭ್ಯ** ಕಲ್ಪಿಸುತ್ತೇವೆ.



**03**

**'ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ'** ಅಡಿಯಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿರುವ ಸ್ವಸಹಾಯ ಸಂಘದ ಒಬ್ಬ ಸದಸ್ಯನಿಗೆ **ಸ್ಟಾರ್ಟ್‌ಅಪ್** ಆರಂಭಿಸಲು **₹ 10 ಲಕ್ಷ ಬಂಡವಾಳ ನಿಧಿ** ಒದಗಿಸುತ್ತೇವೆ.



**04**

**ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಮೂಲಕ ವಿಶ್ವ ದರ್ಜೆಯ ಪರಿಸರ ವ್ಯವಸ್ಥೆಯನ್ನು ರಚಿಸಿ ಕರ್ನಾಟಕವನ್ನು ಜಾಗತಿಕ ಕ್ರೀಡಾ ಶಕ್ತಿಯಾಗಿ ರೂಪಿಸುತ್ತೇವೆ.**

- ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸುವ ಕರ್ನಾಟಕದ **ಕ್ರೀಡಾಪಟುಗಳಿಗೆ ಆರ್ಥಿಕ ನೆರವು ಮತ್ತು ಗುಣಮಟ್ಟದ ತರಬೇತಿ** ಒದಗಿಸುತ್ತೇವೆ.
- ಪ್ರತಿ ವಲಯಕ್ಕೆ ಒಂದರಂತೆ ವಸತಿ ಮತ್ತು ತರಬೇತಿ ಸೌಲಭ್ಯಗಳೊಂದಿಗೆ **ಒಲಿಂಪಿಕ್ ದರ್ಜೆಯ 7 ಮಲ್ಟಿ ಸ್ಪೋರ್ಟ್ಸ್ ಅರೇನಾ**ಗಳನ್ನು ಸ್ಥಾಪಿಸುತ್ತೇವೆ. ಜತೆಗೆ, **ಕೊಡಗಿನಲ್ಲಿ ಹಾಕಿ ಕ್ರೀಡಾಂಗಣ**ವನ್ನು ನಿರ್ಮಿಸುತ್ತೇವೆ.



**05**

ಎಲ್ಲಾ ತಾಲೂಕು ಕೇಂದ್ರಗಳಲ್ಲಿ **'ಸ್ವದೇಶಿ ಕ್ರೀಡೆ'** ಕಬಡ್ಡಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ, ಕಬಡ್ಡಿ ಮ್ಯಾಟ್ ಗಳನ್ನು ಒದಗಿಸುತ್ತೇವೆ. **ಕಬಡ್ಡಿಗಾಗಿ ರಾಷ್ಟ್ರೀಯ ಉತ್ಕೃಷ್ಟತಾ ಕೇಂದ್ರ**ವನ್ನು ಸ್ಥಾಪಿಸುತ್ತೇವೆ.



# ಸಂಸ್ಕೃತಿ ಮತ್ತು ಪರಂಪರೆ

## ಭವ್ಯ ಸಾಂಸ್ಕೃತಿಕ ಪರಂಪರೆಯ ಅನಾವರಣ



# ಸಾಧನೆಗಳು

ಶ್ರೀ ಬಸವೇಶ್ವರರ ಗೌರವಾರ್ಥ **₹ 600 ಕೋಟಿ** ವೆಚ್ಚದಲ್ಲಿ **ಅನುಭವ ಮಂಟಪ** ನಿರ್ಮಾಣವನ್ನು ಕೈಗೆತ್ತಿಕೊಂಡಿದ್ದೇವೆ.

2021 ರಲ್ಲಿ **ಗೋಹತ್ಯೆ ವಿರೋಧಿ ಕಾಯ್ದೆ** ಜಾರಿಗೊಳಿಸಿದ್ದೇವೆ.

ವಾರಾಣಸಿ , ಅಯೋಧ್ಯೆ ಮತ್ತು ಪ್ರಯಾಗ್‌ರಾಜ್‌ನಂತಹ ಪುಣ್ಯ ಕ್ಷೇತ್ರಗಳಿಗೆ ಭೇಟಿ ನೀಡುವ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಭಾರತದ ಮೊದಲ **'ಭಾರತ್ ಗೌರವ್ ಕಾಶಿ ರೈಲು'** ಸಂಚಾರ ಆರಂಭಿಸಿದ್ದೇವೆ.

ಕೊಪ್ಪಳ ಜಿಲ್ಲೆಯ **ಅಂಜನಾದ್ರಿ ಬೆಟ್ಟ** ಮತ್ತು **ಆಂಜನೇಯ ಸ್ವಾಮಿ ದೇವಸ್ಥಾನದ ಸಮಗ್ರ ಅಭಿವೃದ್ಧಿ**ಯನ್ನು ಕೈಗೆತ್ತಿಕೊಳ್ಳುತ್ತಿದ್ದೇವೆ.

ನಾಡಪ್ರಭು ಶ್ರೀ ಕೆಂಪೇಗೌಡರ 108 ಅಡಿ ಎತ್ತರದ **'ಪ್ರಗತಿಯ ಪ್ರತಿಮೆ'**ಯನ್ನು ಅನಾವರಣಗೊಳಿಸಿದ್ದೇವೆ.

ಕಾಶಿಗೆ ತೆರಳುವ ಎಲ್ಲ ಯಾತ್ರಾರ್ಥಿಗಳಿಗೆ **₹ 5,000 ಸಬ್ಸಿಡಿ** ನೀಡುತ್ತಿದ್ದೇವೆ.

2022ರಲ್ಲಿ ಬಲವಂತದ/ಕಾನೂನು ಬಾಹಿರ **ಮತಾಂತರ ವಿರೋಧಿ** ಕಾನೂನನ್ನು ಅಂಗೀಕರಿಸಿದ್ದೇವೆ.

**ರಾಮನಗರ**ದಲ್ಲಿ ಭವ್ಯವಾದ **ರಾಮಮಂದಿರ** ನಿರ್ಮಿಸುತ್ತಿದ್ದೇವೆ.

**ಪಿಎಫ್‌ಐ ಮತ್ತು ಇತರ ಜಿಹಾದಿ ಸಂಘಟನೆ**ಗಳನ್ನು ನಿಷೇಧಿಸಿದ್ದೇವೆ.

# ಭರವಸೆಗಳು

**01** ವನ್ಯಜೀವಿ ಪ್ರವಾಸೋದ್ಯಮ, ಬೀಚ್ ಟೂರಿಸಂ, ಹೆರಿಟೇಜ್ ಟೂರಿಸಂ, ಎಸ್ಟೇಟ್ ಟೂರಿಸಂನಂಥ ವಿಷಯಾಧಾರಿತ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಮೂಲಕ ಕರ್ನಾಟಕವನ್ನು ಭಾರತದ ಪ್ರಮುಖ ಪ್ರವಾಸಿ ತಾಣವನ್ನಾಗಿ ರೂಪಿಸುತ್ತೇವೆ. ಇದರೊಂದಿಗೆ **'ವಿಸಿಟ್ ಕರ್ನಾಟಕ' ಪ್ರವಾಸೋದ್ಯಮ ಸಹಾಯವಾಣಿ**ಯನ್ನು ಆರಂಭಿಸಿ, ಕರೆ ಮಾಡುವವರಿಗೆ ಕರ್ನಾಟಕದ ವಿವಿಧ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ನೀಡುತ್ತೇವೆ. ಜತೆಗೆ, ಪ್ರವಾಸಿ ನಿರ್ವಾಹಕರು ಪ್ರವಾಸವನ್ನು ಯೋಜಿಸಲು ಸಹಾಯ ಮಾಡುತ್ತಾರೆ.



**02** ಅತ್ಯಾಧುನಿಕ ಮೂಲಸೌಕರ್ಯಗಳನ್ನು ಒದಗಿಸಿ ಕರ್ನಾಟಕವನ್ನು ದೇಶದ ಅತ್ಯಂತ ಮೆಚ್ಚಿನ ಪ್ರವಾಸಿ ತಾಣವನ್ನಾಗಿ ರೂಪಿಸಲು **ಕಲ್ಯಾಣ ಸರ್ಕ್ಯೂಟ್, ಬನವಾಸಿ ಸರ್ಕ್ಯೂಟ್, ಪರಶುರಾಮ ಸರ್ಕ್ಯೂಟ್ ಮತ್ತು ಕಾವೇರಿ ಸರ್ಕ್ಯೂಟ್, ಗಾಣಗಾಪುರ ಕಾರಿಡಾರ್** ಅನ್ನು ಅಭಿವೃದ್ಧಿಪಡಿಸಲು **₹ 1,500 ಕೋಟಿ** ವಿನಿಯೋಗಿಸುತ್ತೇವೆ.



**03** ಅಯೋಧ್ಯೆ, ವಾರಾಣಸಿ, ಕೇದಾರನಾಥ, ರಾಮೇಶ್ವರಂ, ತಿರುಪತಿ, ವೇಲಾಂಕಣ್ಣಿ ಮತ್ತು ಅಜ್ಮೀರ್ ಶರೀಫ್ ನಂತಹ ಪ್ರಮುಖ ಯಾತ್ರಾ ಸ್ಥಳಗಳಲ್ಲಿ **ಕನ್ನಡದಲ್ಲಿ ಸಹಾಯವಾಣಿ**ಯನ್ನು ಆರಂಭಿಸುತ್ತೇವೆ.



**04** ತಿರುಪತಿ, ಅಯೋಧ್ಯೆ, ಕಾಶಿ, ರಾಮೇಶ್ವರಂ, ಕೊಲ್ಹಾಪುರ, ಶಬರಿಮಲೆ ಮತ್ತು ಕೇದಾರನಾಥದಂತಹ ಪುಣ್ಯ ಕ್ಷೇತ್ರಗಳಿಗೆ ಯಾತ್ರೆ ಕೈಗೊಳ್ಳುವ ಬಡ ಕುಟುಂಬಗಳಿಗೆ ಒಂದು ಬಾರಿ **₹ 25,000** ನೀಡುತ್ತೇವೆ.



**05** **'ದೇವಸ್ಥಾನ ಜೀರ್ಣೋದ್ಧಾರ ಅನುದಾನ'**- ರಾಜ್ಯಾದ್ಯಂತ ಇರುವ ಪುರಾತನ ದೇವಾಲಯಗಳ ಜೀರ್ಣೋದ್ಧಾರ ಮತ್ತು ಸಂರಕ್ಷಣೆಗೆ **₹ 1000 ಕೋಟಿ** ವಿನಿಯೋಗಿಸುತ್ತೇವೆ.




**06** ಬನವಾಸಿ, ಶಿರಸಿ, ಬನಶಂಕರಿ, ಗಾಣಗಾಪುರ, ಕೊಲ್ಲೂರು, ನಾಯಕನಹಟ್ಟಿ, ಮೈಸೂರು, ಮಲೆಮಹದೇಶ್ವರ ಬೆಟ್ಟ, ಕೈವಾರದ **ಪ್ರಮುಖ ದೇವಾಲಯಗಳ ಸುತ್ತಮುತ್ತಲಿನ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿ**ಗೆ ವಿಶೇಷ ಕ್ರಮ ಕೈಗೊಳ್ಳುತ್ತೇವೆ.



**07** **ದೇವಾಲಯದ ಆಡಳಿತದ ಸಂಪೂರ್ಣ ಸ್ವಾಯತ್ತತೆ**ಯನ್ನು ಭಕ್ತರಿಗೆ ನೀಡಲು ಮತ್ತು **ದೇವಾಲಯದ ಸುಸ್ಥಿರ ಆರ್ಥಿಕತೆಗಾಗಿ ದೇಗುಲದ ಸುತ್ತಲಿನ ಸ್ಥಳೀಯ ವ್ಯವಹಾರ**ಗಳನ್ನು ನಿಯಂತ್ರಿಸಲು ನಾವು ಸಮಿತಿಯನ್ನು ರಚಿಸುತ್ತೇವೆ.



**08** ಕರ್ನಾಟಕದ ಅತ್ಯಮೂಲ್ಯವಾದ ಹಸ್ತಪ್ರತಿಗಳು ಮತ್ತು ಮೌಖಿಕ ಪ್ರಾಕಾರಗಳನ್ನು ಸಂಗ್ರಹಿಸಿ, ಸಂರಕ್ಷಿಸಿ ಮತ್ತು ಡಿಜಿಟಲೀಕರಣಗೊಳಿಸಲು ₹250 ಕೋಟಿ ಅನುದಾನದಲ್ಲಿ **'ಶಿವರಾಮ ಕಾರಂತ ಕರ್ನಾಟಕ ಹಸ್ತಪ್ರತಿ ಮಿಷನ್'** ಪ್ರಾರಂಭಿಸುತ್ತೇವೆ.



**09** **ಟೂರಿಸ್ಟ್ ಗೈಡ್ ತರಬೇತಿ ಮತ್ತು ಪರವಾನಗಿ ಮಿಷನ್** ಪ್ರಾರಂಭಿಸುತ್ತೇವೆ. ಅದರ ಅಡಿಯಲ್ಲಿ, ಪ್ರವಾಸ ಮಾರ್ಗದರ್ಶನವನ್ನು ಲಾಭದಾಯಕ ಪ್ರವಾಸೋದ್ಯಮ-ಸಂಬಂಧಿತ ವೃತ್ತಿಯನ್ನಾಗಿ ಪರಿವರ್ತಿಸುವ ಜತೆಗೆ ಜಾಗತಿಕ ಪ್ರವಾಸಿಗರಿಗೆ ಕರ್ನಾಟಕವನ್ನು ಪ್ರಮುಖ ತಾಣವಾಗಿ ರೂಪಿಸಲು, ಹಾಲಿ ಪ್ರವಾಸ ಮಾರ್ಗದರ್ಶಿ ಪ್ರಮಾಣೀಕರಣ ವ್ಯವಸ್ಥೆಯನ್ನು ನವೀಕರಿಸುತ್ತೇವೆ.



# ಬೆಂಗಳೂರು



# ಸಾಧನೆಗಳು

ದೇಶದಲ್ಲಿರುವ **115 ಯುನಿಕಾರ್ನ್**ಗಳಲ್ಲಿ **43** ಕ್ಕೆ ಬೆಂಗಳೂರು ನೆಲೆಯಾಗಿದೆ.

---

69.6 ಕಿಮೀ ದೂರದ **ನಮ್ಮ ಮೆಟ್ರೋ ಸಂಚಾರ**ವನ್ನು ಕಾರ್ಯಗತಗೊಳಿಸಿದ್ದೇವೆ.

---

2023-24ರ ಬಜೆಟ್‌ನಲ್ಲಿ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ **₹ 9,698 ಕೋಟಿ** ಅನುದಾನ ನೀಡಿದ್ದೇವೆ.

---


ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಅಡಿ ಕರ್ನಾಟಕದಲ್ಲಿ **3 ಲಕ್ಷಕ್ಕೂ ಹೆಚ್ಚು ಮನೆ**ಗಳನ್ನು ನಿರ್ಮಿಸಿದ್ದೇವೆ.

---

ಬಿಬಿಎಂಪಿ ಮೂಲಕ **ಅಮೃತ ನಗರೋತ್ಥಾನ ಯೋಜನೆ**ಯಡಿ **₹ 6,000 ಕೋಟಿ** ವೆಚ್ಚದ ಕಾಮಗಾರಿ ಆರಂಭಿಸಿದ್ದೇವೆ.

---

ಬೆಂಗಳೂರು ಉಪನಗರ ರೈಲು ಯೋಜನೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, **₹16,000 ಕೋಟಿ** ವೆಚ್ಚದಲ್ಲಿ 40 ತಿಂಗಳೊಳಗೆ



# ಭರವಸೆಗಳು

01

ನಮ್ಮ ಮುಂದಿನ ಪೀಳಿಗೆಗಾಗಿ ಬೆಂಗಳೂರನ್ನು ಅಭಿವೃದ್ಧಿಪಡಿಸಿ, ಅದನ್ನು **'ರಾಜ್ಯ ರಾಜಧಾನಿ ಪ್ರದೇಶ'** ಎಂದು ಗುರುತಿಸಲಾಗುತ್ತದೆ. ತಂತ್ರಜ್ಞಾನ-ಆಧಾರಿತ ನಗರ ಅಭಿವೃದ್ಧಿ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುತ್ತೇವೆ. ಸುಲಲಿತ ಜೀವನಕ್ಕೆ ಅನುವುಮಾಡಿಕೊಡುವ ಸುಸಂಘಟಿತ ಸಾರಿಗೆ ಜಾಲ ಸೃಷ್ಟಿಸುತ್ತೇವೆ. ಅಲ್ಲದೇ, ಬೆಂಗಳೂರನ್ನು ಡಿಜಿಟಲ್ ಇನ್ನೋವೇಶನ್‌ನ ಜಾಗತಿಕ ಕೇಂದ್ರವಾಗಿ ರೂಪಿಸಲು ಪೂರಕ ಪರಿಸರ ವ್ಯವಸ್ಥೆ ಕಲ್ಪಿಸುತ್ತೇವೆ.

## ಭವಿಷ್ಯಕ್ಕಾಗಿ ಸಾರಿಗೆ

a ವಿಶ್ವ ದರ್ಜೆಯ ಮಲ್ಟಿ-ಮೋಡಲ್ ಟ್ರಾನ್ಸ್‌ಪೋರ್ಟ್ ಹಬ್ **'ಕಾನ್‌ಕಾರ್ಡ್ ಬೆಂಗಳೂರು'** ಸ್ಥಾಪಿಸುತ್ತೇವೆ. ಇದು ಸಾರ್ವಜನಿಕ ಸಾರಿಗೆ ಸೇವೆಗಳಿಗೆ ಏಕೀಕೃತ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.

b ಟ್ರಾನ್ಸ್‌ಪೋರ್ಟ್ ಫಾರ್ ಲಂಡನ್‌ನಿಂದ ಪ್ರೇರಿತವಾದ **ಬೆಂಗಳೂರು ಏಕೀಕೃತ ಟ್ರಾನ್ಸಿಟ್ ನೆಟ್‌ವರ್ಕ್** ರಚಿಸುತ್ತೇವೆ. ಬೆಂಗಳೂರು ಏಕೀಕೃತ ಸಾರಿಗೆ ಜಾಲವು ಇವುಗಳನ್ನು ಒಳಗೊಂಡಿರುತ್ತದೆ:

| | **ಸುಗಮ ಸಂಚಾರ** |
|---|---|
| 1 | **'ಮೈ ಬೆಂಗಳೂರು, ಮೈ ರೂಟ್'** ಎಂಬ ಇಂಟಿಗ್ರೇಟೆಡ್ ಟಿಕೆಟ್-ಬುಕಿಂಗ್ ಅಪ್ಲಿಕೇಶನ್ ಆರಂಭಿಸುತ್ತೇವೆ, ಇದು ವಿವಿಧ ಸಾರಿಗೆ ವ್ಯವಸ್ಥೆಯ ಏಕೀಕೃತ ಬುಕಿಂಗ್ ಅಪ್ಲಿಕೇಶನ್‌ನಂತೆ ಕಾರ್ಯನಿರ್ವಹಿಸುತ್ತದೆ. |
| 2 | **'ಒನ್ ಸಿಟಿ ಒನ್ ಕಾರ್ಡ್'** ಎಂಬ ಯೂನಿವರ್ಸಲ್ ಟ್ರಾವೆಲ್ ಕಾರ್ಡ್ ಪ್ರಾರಂಭಿಸುತ್ತೇವೆ. ಇದರಿಂದ ಬೆಂಗಳೂರಿನ ಎಲ್ಲಾ ರೀತಿಯ ಸಾರ್ವಜನಿಕ ಸಾರಿಗೆ ಪ್ರಯಾಣ ಸುಗಮವಾಗಲಿದೆ. |

c ಸಿಲ್ಕ್ ಬೋರ್ಡ್ ಜಂಕ್ಷನ್, ಹೆಬ್ಬಾಳ, ಗೊರಗುಂಟೆ ಪಾಳ್ಯ, ಮೇಖ್ರಿ ಸರ್ಕಲ್, ಸರ್ಜಾಪುರ ಮತ್ತು ಇತರ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ನಿಭಾಯಿಸಲು ಕೃತಕ ಬುದ್ಧಿಮತ್ತೆ ಚಾಲಿತ ಪರಿಹಾರಗಳನ್ನು ಸಂಯೋಜಿಸುವ ಸಮಗ್ರ ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸುತ್ತೇವೆ. ಈ ಅಪ್ಲಿಕೇಶನ್ **ಸುಗಮ ಸಂಚಾರ ನಿರ್ವಹಣೆ, ಸ್ಮಾರ್ಟ್ ಪಾರ್ಕಿಂಗ್ ಪರಿಹಾರ** ಮತ್ತು **ಸುರಕ್ಷಿತ ಸಂಚಾರ**ಕ್ಕೆ ಹೆಚ್ಚಿನ ಒತ್ತು ನೀಡಲಿದೆ.



## ಡಿಜಿಟಲ್ 4.0

a **'ಯುವ- ಕರುನಾಡು- ಡಿಜಿಟಲ್ 4.0'** ಪ್ರಾರಂಭಿಸುತ್ತೇವೆ. ಈ ಮೂಲಕ ಟೆಲ್ ಅವಿವ್ ಮಾದರಿಯಿಂದ ಪ್ರೇರಿತವಾದ ಕರ್ನಾಟಕದ ಮೊದಲ ಗ್ಲೋಬಲ್ ಇನ್ನೋವೇಶನ್ ಹಬ್ ಸ್ಥಾಪಿಸುತ್ತೇವೆ. ಸ್ಟಾರ್ಟ್‌ಅಪ್ ಇನ್ಕ್ಯುಬೇಟರ್ ಮತ್ತು ವೇಗವರ್ಧಕದೊಂದಿಗೆ ಪ್ರತಿ ವರ್ಷ 250 ಆಯ್ದ ಯುವಜನರಿಗೆ ತಲಾ ₹ 50 ಲಕ್ಷ ಮೂಲ ಬಂಡವಾಳವನ್ನು ಒದಗಿಸುವ ಜತೆಗೆ ಪೂರಕ ನೀತಿ ಪರಿಸರವನ್ನು ಸಕ್ರಿಯಗೊಳಿಸುತ್ತೇವೆ.

b ಬೆಂಗಳೂರಿನಲ್ಲಿ ಅತ್ಯಾಧುನಿಕ ಇನ್ಕ್ಯುಬೇಶನ್ ಕೇಂದ್ರಗಳನ್ನು ಸ್ಥಾಪಿಸುವ ಜತೆಗೆ ಖಾಸಗಿ ಇನ್ಕ್ಯುಬೇಟರ್‌ಗಳು ಮತ್ತು ವೇಗವರ್ಧಕಗಳನ್ನು ಬೆಂಬಲಿಸಲು **'ಯುವಗುರು-ಡಿಜಿಟಲ್ 4.0'** ಯೋಜನೆಯನ್ನು ಪ್ರಾರಂಭಿಸುತ್ತೇವೆ. ಇನ್ಕ್ಯುಬೇಟರ್ ಸೆಟಪ್‌ಗಳನ್ನು ಒದಗಿಸುವುದರ ಜತೆಗೆ ಸ್ಥಿರ ವೆಚ್ಚದ ಹೂಡಿಕೆಗೆ (ಭೂಮಿ ಮತ್ತು ಕಟ್ಟಡವನ್ನು ಹೊರತುಪಡಿಸಿ) ಗರಿಷ್ಠ 50% ಅಥವಾ ₹1 ಕೋಟಿ (ಯಾವುದು ಕಡಿಮೆಯೋ ಅದು) ಒಂದು-ಬಾರಿಯ ಬಂಡವಾಳ ಅನುದಾನವನ್ನು ಒದಗಿಸುತ್ತೇವೆ.

c ಜರ್ಮನಿ ಮತ್ತು ಜಪಾನ್‌ನಲ್ಲಿರುವಂತೆ ವೇಗದ ಇಂಟರ್ನೆಟ್ ಸೌಲಭ್ಯ ಒದಗಿಸುವ ಮೂಲಕ ಬೆಂಗಳೂರನ್ನು ಮಾಹಿತಿ ಕಣಜದ ರಾಜಮಾರ್ಗವಾಗಿ ರೂಪಿಸಲು **ಗಿಗಾಬಿಟ್ ಆಪ್ಟಿಕಲ್ ಫೈಬರ್ ನೆಟ್‌ವರ್ಕ್** ಸ್ಥಾಪಿಸುತ್ತೇವೆ.

d ಮಗು ಕಲಿಕೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವಂತೆ ಮಾಡಲು ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ **'ವರ್ಚುವಲ್ ರಿಯಾಲಿಟಿ ಲ್ಯಾಬ್'** ಸ್ಥಾಪಿಸುತ್ತೇವೆ. ಈ ಮೂಲಕ ಅತ್ಯಾಧುನಿಕ ತಂತ್ರಜ್ಞಾನದ ಕಲಿಕೆಯ ಕಾರ್ಯಕ್ರಮವಾದ **'ವರ್ಚುವಲ್ ವಿದ್ಯಾಯೋಜನೆ'**ಯನ್ನು ಪ್ರಾರಂಭಿಸುತ್ತೇವೆ.

e ಅತ್ಯಾಧುನಿಕ **'ಟೆಕ್-ನೇತೃತ್ವದ ರೂಪಾಂತರ ಸಂಶೋಧನಾ ಕೇಂದ್ರ,'** ಸ್ಥಾಪಿಸುವ ಮೂಲಕ ಬೆಂಗಳೂರನ್ನು ವಿಶ್ವದ ಹೊಸ-ಯುಗದ ಪ್ರಬುದ್ಧತೆಯ ರಾಜಧಾನಿಯಾಗಿ ರೂಪಿಸುತ್ತೇವೆ. ಈ ಕೇಂದ್ರವು ಕೃತಕ ಬುದ್ಧಿಮತ್ತೆ, ಮಿಷೀನ್ ಲರ್ನಿಂಗ್, ಕ್ವಾಂಟಮ್ ಕಂಪ್ಯೂಟಿಂಗ್, ಬ್ಲಾಕ್‌ಚೈನ್ ಟೆಕ್ನಾಲಜಿ ಮತ್ತು ರೊಬೊಟಿಕ್ಸ್‌ಗೆ ಆದ್ಯತೆ ನೀಡಲಿದೆ.

f ಆಡಳಿತಕ್ಕೆ ಸಂಬಂಧಿಸಿದ ಸ್ಥಳೀಯ ಮಾಹಿತಿಯನ್ನು ತಿಳಿಯಲು **'ಬೆಂಗಳೂರು ಆನ್ ಬೋರ್ಡ್'** ಎಂಬ ಡ್ಯಾಶ್‌ಬೋರ್ಡ್ ಪರಿಚಯಿಸುವ ಮೂಲಕ ಬೆಂಗಳೂರಿನಲ್ಲಿ ಡಿಜಿಟಲ್ ಆಡಳಿತಕ್ಕೆ ಒತ್ತು ನೀಡುತ್ತೇವೆ. ಈ ಡ್ಯಾಶ್‌ಬೋರ್ಡ್, ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಏಜೆನ್ಸಿಗಳ ಯೋಜನೆ ಮತ್ತು ಯೋಜನಾ ನಿರ್ವಹಣೆಯನ್ನು ಸುಗಮಗೊಳಿಸುತ್ತದೆ.

g ನೀರಿನ ಸಮರ್ಪಕ ಬಳಕೆಗಾಗಿ ಬೆಂಗಳೂರಿನಲ್ಲಿ **'ಸ್ಮಾರ್ಟ್ ವಾಟರ್ ಯೋಜನೆ'** ಆರಂಭಿಸುತ್ತೇವೆ. ನಗರದ ನೀರು ಪೂರೈಕೆಯ ಮೇಲ್ವಿಚಾರಣೆ ಮತ್ತು ನಿರ್ವಹಣೆಗಾಗಿ ನೈಜ-ಸಮಯದ ಡೇಟಾ ವಿಶ್ಲೇಷಣೆ ಮತ್ತು ಸ್ವಯಂಚಾಲಿತ ನಿಯಂತ್ರಣ ವ್ಯವಸ್ಥೆಗಳಂತಹ ಸುಧಾರಿತ ತಂತ್ರಜ್ಞಾನಗಳನ್ನು ಬಳಸುತ್ತೇವೆ.

## 02

### ರಾಜಕಾಲುವೆಗಳ ಪುನಶ್ಚೇತನಕ್ಕಾಗಿ 'ಮಿಷನ್ ರಾಜಕಾಲುವೆ' ಆರಂಭಿಸುತ್ತೇವೆ

**a** ಕಟ್ಟಡಗಳ ಒಳಚರಂಡಿ, ಹಳೆಯ ಒಳ ಚರಂಡಿ ನೀರು ಸಂಪರ್ಕ, ಹಾಲಿ ಇರುವ ಒಳಚರಂಡಿಗಳಲ್ಲಿ ಹೂಳೆತ್ತುವುದು -ಈ ಎಲ್ಲವನ್ನು ಒಳಗೊಂಡ ಸಮಗ್ರ ರಾಜಕಾಲುವೆ ವ್ಯವಸ್ಥೆಯ ಪುನಾರಚನೆ.

**b** ಮಳೆ ನೀರು ಹಾದುಹೋಗುವ ಕಾಲುವೆಗಳನ್ನು ಜಲಮೂಲಗಳೊಂದಿಗೆ ಸಂಪರ್ಕಿಸುವ ವ್ಯವಸ್ಥೆ. ಎಲ್ಲಾ ರಾಜಕಾಲುವೆಗಳ ಮೇಲಿನ ಒತ್ತುವರಿಗಳನ್ನು ತೆರವು ಗೊಳಿಸಿ, ಅದರ ಮೇಲೆ ಪಾದಚಾರಿ ಮಾರ್ಗಗಳ ನಿರ್ಮಾಣ.

## 03

### ಬೆಂಗಳೂರಿನ ಅಪಾರ್ಟ್‌ಮೆಂಟ್‌ಗಳಲ್ಲಿ ಸುಲಲಿತ ಜೀವನಕ್ಕಾಗಿ ಈ ಕೆಳಗಿನ ಸುಧಾರಣೆಗಳನ್ನು ಜಾರಿಗೊಳಿಸುತ್ತೇವೆ:


**a** ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯಿದೆ, 1972ಅನ್ನು ಪರಿಶೀಲಿಸಿ, ಸೂಕ್ತ ತಿದ್ದುಪಡಿಗಳನ್ನು ಸೂಚಿಸಲು ಮತ್ತು ಮನೆ ಖರೀದಿದಾರರ ಹಕ್ಕುಗಳ ರಕ್ಷಣೆಗೆ ಕರ್ನಾಟಕ ನಿವಾಸಿಗಳ ಕಲ್ಯಾಣ ಸಲಹಾ ಸಮಿತಿ ಯನ್ನು ರಚಿಸುತ್ತೇವೆ.

**b** ಅಪಾರ್ಟ್‌ಮೆಂಟ್‌ಗಳಿಗೆ ಸಂಬಂಧಿಸಿದ ಎಲ್ಲ ಅಪ್ಲಿಕೇಷನ್‌ಗಳು ಆನ್‌ಲೈನ್ ನಲ್ಲಿ ಲಭ್ಯವಾಗುವಂತೆ ಮಾಡುವುದು, ಈ ಅಪ್ಲಿಕೇಷನ್‌ಗಳಲ್ಲಿ ಇರುವ ಕುಂದುಕೊರತೆಗಳನ್ನು ಸಮಯೋಚಿತವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಮಾನಿಟರಿಂಗ್ ಸಿಸ್ಟಮ್ ಜಾರಿಗೆ ತರುತ್ತೇವೆ.


**c** ಆರ್‌ಡಬ್ಲ್ಯೂಎಗಳು ಎದುರಿಸುತ್ತಿರುವ ವಿವಿಧ ತೊಂದರೆಗಳ ತಡೆರಹಿತ ಪರಿಹಾರಕ್ಕಾಗಿ ಕರ್ನಾಟಕ ಮನೆ ಮಾಲೀಕರ ಕುಂದುಕೊರತೆ ನಿವಾರಣಾ ಕೇಂದ್ರ ಸ್ಥಾಪಿಸುತ್ತೇವೆ.

## 04

ಬೆಂಗಳೂರಿನ ಎಲ್ಲಾ ಬೀದಿಗಳಲ್ಲಿ **ಸಿಸಿಟಿವಿ**ಗಳನ್ನು ಅಳವಡಿಸುತ್ತೇವೆ. ಇದನ್ನು ಮಹಿಳೆಯ ಸುರಕ್ಷತೆ ಮತ್ತು ಭದ್ರತೆಗಾಗಿ ಐಸಿಸಿಸಿಯೊಂದಿಗೆ ಜೋಡಣೆ ಮಾಡಲಾಗುವುದು.



# ಮಧ್ಯ ಕರ್ನಾಟಕ



## ಭರವಸೆಗಳು

**01** **ಭದ್ರಾ ಮೇಲ್ದಂಡೆ**ಯಂತಹ ಪ್ರಮುಖ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಮೂಲಕ ನೀರಾವರಿ ವ್ಯವಸ್ಥೆಯನ್ನು ಸಮರ್ಪಕಗೊಳಿಸುತ್ತೇವೆ.

---

**02** **ಚಿತ್ರದುರ್ಗ ಮತ್ತು ದಾವಣಗೆರೆ**ಯಲ್ಲಿ ಏಮ್ಸ್ ಮಾದರಿಯಲ್ಲಿ **ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್)** ಸ್ಥಾಪಿಸುತ್ತೇವೆ.

---

**03** **ದಾವಣಗೆರೆಯಲ್ಲಿ ಆಹಾರ ಸಂಸ್ಕರಣಾ ಪಾರ್ಕ್** ಸ್ಥಾಪಿಸಲು ಕೆ-ಅಗ್ರಿ ಫಂಡ್ ಬಳಸುತ್ತೇವೆ.

---


**04** ಈಗಿರುವ ಕೆರೆಗಳಿಗೆ ಕಾಯಕಲ್ಪ ನೀಡಲು ಮತ್ತು ಕೃತಕ ಕೆರೆಗಳನ್ನು ನಿರ್ಮಿಸಲು ಪೈಪ್‌ಲೈನ್ ಸೇರಿದಂತೆ ನೀರಿನ ಸೌಲಭ್ಯ ಕಲ್ಪಿಸಲು **₹ 500 ಕೋಟಿ** ಮೀಸಲಿಡುತ್ತೇವೆ.

## ಸಾಧನೆಗಳು

- **ತುಮಕೂರು-ಚಿತ್ರದುರ್ಗ-ದಾವಣಗೆರೆ ರೈಲ್ವೆ ಯೋಜನೆ**ಗೆ **₹ 220 ಕೋಟಿ** ಮಂಜೂರು ಮಾಡಿದ್ದೇವೆ.
- **'ಭದ್ರಾ ಮೇಲ್ದಂಡೆ ಯೋಜನೆ'**ಗೆ ಮೊದಲ ಕಂತಿನಲ್ಲಿ ₹ 5,300 ಕೋಟಿ ಮಂಜೂರು ಮಾಡಿದ್ದೇವೆ.
- **ವಾಣಿ ವಿಲಾಸ ಸಾಗರ ಕಾಲುವೆ**ಗಳ ಹೂಳು ತೆಗೆಯಲು ಹಾಗೂ ಆಧುನೀಕರಣಕ್ಕೆ **₹ 738 ಕೋಟಿ** ಅನುದಾನ ಬಿಡುಗಡೆ ಮಾಡಿದ್ದೇವೆ.
- **ಹೊಸಪೇಟೆ ಮತ್ತು ಚಿತ್ರದುರ್ಗ**ಕ್ಕೆ ಸಂಪರ್ಕ ಕಲ್ಪಿಸುವ ದ್ವಿಪಥದ ರಾಷ್ಟ್ರೀಯ ಹೆದ್ದಾರಿಯನ್ನು **ಚತುಷ್ಪಥ ಎಕ್ಸ್‌ಪ್ರೆಸ್‌ವೇ** ಆಗಿ ಮೇಲ್ದರ್ಜೆಗೇರಿಸಿದ್ದೇವೆ.
- **ಚಿತ್ರದುರ್ಗದ ಮೊಳಕಾಲ್ಮೂರು** ಸೇರಿದಂತೆ 9 ಸ್ಥಳಗಳಲ್ಲಿ ಕೆಎಸ್ಎಸ್ಐಡಿಸಿಯಿಂದ **ಹೊಸ ಕೈಗಾರಿಕಾ ಕ್ಲಸ್ಟರ್**ಗಳನ್ನು ಅಭಿವೃದ್ಧಿಪಡಿಸುವುದಾಗಿ 2023-24ರ ಬಜೆಟ್‌ನಲ್ಲಿ ಘೋಷಿಸಿದ್ದೇವೆ.
- **'ದಾವಣಗೆರೆ ಸ್ಮಾರ್ಟ್ ಸಿಟಿ ಮಿಷನ್'** ಅಡಿಯಲ್ಲಿ ರಾಜ್ಯ ಬಿಜೆಪಿ ಸರ್ಕಾರ **₹ 441 ಕೋಟಿ ವೆಚ್ಚದಲ್ಲಿ 69 ಯೋಜನೆ**ಗಳನ್ನು ಕೈಗೆತ್ತಿಕೊಂಡಿದೆ.



# ಕರಾವಳಿ ಕರ್ನಾಟಕ



## ಸಾಧನೆಗಳು

- **ಸಾಗರಮಾಲಾ ಯೋಜನೆ**ಯಡಿ ಕರಾವಳಿ ಪ್ರದೇಶದಲ್ಲಿ 18 ಅಭಿವೃದ್ಧಿ ಯೋಜನೆಗಳನ್ನು ಪೂರ್ಣಗೊಳಿಸಿದ್ದೇವೆ. ಜತೆಗೆ, **₹ 950 ಕೋಟಿ ಮೊತ್ತದ 14 ಯೋಜನೆ**ಗಳಿಗೆ ಅನುಮೋದನೆ ನೀಡಿದ್ದೇವೆ. ಮಂಗಳೂರು ಬಂದರಿನಲ್ಲಿ 3ನೇ ಹಂತದ ನವೀಕರಣ ಕಾಮಗಾರಿ, ಮಲ್ಪೆ ಬಂದರಿನ ವಿಸ್ತರಣೆ ಕಾರ್ಯ ನಡೆಯುತ್ತಿದೆ.

---

- **ಡಬಲ್ ಎಂಜಿನ್ ಬಿಜೆಪಿ ಸರ್ಕಾರವು ಮೀನುಗಾರರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಿದೆ.**

  - 2022-23ರಲ್ಲಿ **ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಮತ್ತು ಮತ್ಸ್ಯ ಸಿರಿ ಯೋಜನೆ**ಯಡಿ 100 ಆಳ ಸಮುದ್ರ ಮೀನುಗಾರಿಕೆ ದೋಣಿಗಳು.
  - **7,668** ಮೀನುಗಾರರಿಗೆ ಮೀನುಗಾರಿಕೆ ದೋಣಿಗಳನ್ನು ಒದಗಿಸುವುದು. **3,532** ಯಾಂತ್ರೀಕೃತ ದೋಣಿಗಳಿಗೆ 1 ಲಕ್ಷ ಕಿಲೋ ಲೀಟರ್‌ಗೂ ಹೆಚ್ಚು **ತೆರಿಗೆ ಮುಕ್ತ ಸಬ್ಸಿಡಿ ಡೀಸೆಲ್**.
  - ಕೇಬಲ್ ನೆಟ್ ಮೂಲಕ ಮೀನುಗಾರಿಕೆ ನಡೆಸಲು **1,000** ಮೀನುಗಾರರಿಗೆ **₹ 3 ಲಕ್ಷ ಸಹಾಯಧನ.**
  - ಆಶ್ರಯ ರಹಿತ ಮೀನುಗಾರರಿಗೆ ಆದ್ಯತೆಯ ಮೇರೆಗೆ **5,000 ಮನೆಗಳು.**
  - ಸಾಂಕ್ರಾಮಿಕದ ಸಮಯದಲ್ಲಿ ನೋಂದಾಯಿತ **18,746 ಮೀನುಗಾರರಿಗೆ ₹ 3,000 ಪರಿಹಾರ.**

---

- **ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮ**ವನ್ನು ಸ್ಥಾಪಿಸಿದ್ದೇವೆ. ನಿಗಮಕ್ಕೆ ನೀಡಿದ ಹಣವನ್ನು **ಬಿಲ್ಲವ, ಈಡಿಗ ಮತ್ತು ನಾಮಧಾರಿ ಸಮುದಾಯ**ಗಳ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಬಲೀಕರಣಕ್ಕಾಗಿ

## ಭರವಸೆಗಳು

**01** **'ಕರಾವಳಿ ನವೋತ್ಥಾನ ಯೋಜನೆ'** ಅಡಿಯಲ್ಲಿ **₹ 12,000 ಕೋಟಿ** ವೆಚ್ಚದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸುತ್ತೇವೆ, ಈ ಮೂಲಕ ಕರ್ನಾಟಕವು ದೇಶದ ಕರಾವಳಿ ಪ್ರದೇಶಗಳ ಅಭಿವೃದ್ಧಿಯಲ್ಲಿ ಮುನ್ನಡೆ ಸಾಧಿಸುತ್ತದೆ.

- ರಾಜ್ಯದಲ್ಲಿ ಬಂದರುಗಳ ನಿರ್ವಹಣೆ ಸಾಮರ್ಥ್ಯವನ್ನು ಹೆಚ್ಚಿಸಲು 2028ರ ವೇಳೆಗೆ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ **ಸಣ್ಣ ಬಂದರುಗಳನ್ನು ನವೀಕರಿಸುತ್ತೇವೆ.**

- **ಕೇಣಿ ಮತ್ತು ಪಾವಿನಕುರ್ವೆ**ಯಲ್ಲಿ ಬಂದರುಗಳ ನಿರ್ಮಾಣವನ್ನು ಪೂರ್ಣಗೊಳಿಸುತ್ತೇವೆ. ಇದರಿಂದ ಕರ್ನಾಟಕ ಅಂತಾರಾಷ್ಟ್ರೀಯ ಕರಾವಳಿ ವ್ಯಾಪಾರದ ಕೇಂದ್ರವಾಗಿ ಗುರುತಿಸಿಕೊಳ್ಳಲಿದೆ.

---

**02** 2026ರ ವೇಳೆಗೆ ಡೀಸೆಲ್ ಚಾಲಿತ ಮೀನುಗಾರಿಕೆ ದೋಣಿಗಳನ್ನು ಎಲ್‌ಪಿಜಿ ಚಾಲಿತ ದೋಣಿಗಳಾಗಿ ಪರಿವರ್ತಿಸಲು **'ಪರಿಸರ ಸ್ನೇಹಿ ದೋಣಿ ಯೋಜನೆ'** ಪ್ರಾರಂಭಿಸುತ್ತೇವೆ.

---

**03** **ಉತ್ತರ ಕನ್ನಡದಲ್ಲಿ ಏಮ್ಸ್** ಮಾದರಿಯಲ್ಲಿ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್) ಸ್ಥಾಪಿಸುತ್ತೇವೆ.


---

**04** ಪ್ರತಿ ಬಂದರಿಗೆ **₹ 100 ಕೋಟಿ** ನೀಡುವ ಮೂಲಕ ರಾಜ್ಯದ **9 ಮೀನುಗಾರಿಕಾ ಬಂದರು**ಗಳನ್ನು ಮೇಲ್ದರ್ಜೆಗೆ ಏರಿಸಿ, ಆಧುನೀಕರಣಗೊಳಿಸುತ್ತೇವೆ. ಡ್ರೆಡ್ಜಿಂಗ್, ಬಯೋವಾಲ್‌ಗಳನ್ನು ಸ್ಥಾಪಿಸಿ, ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸುತ್ತೇವೆ.

---

**05** **'ಮಿಷನ್ ಕನೆಕ್ಟ್ ಕರ್ನಾಟಕ'**ದ ಅಡಿಯಲ್ಲಿ ಬೆಂಗಳೂರು ಮತ್ತು ಮಂಗಳೂರನ್ನು ಸಂಪರ್ಕಿಸುವ **ರಾಷ್ಟ್ರೀಯ ಹೆದ್ದಾರಿ 75** ಅನ್ನು ಅತ್ಯಾಧುನಿಕ ಎಕ್ಸ್‌ಪ್ರೆಸ್‌ವೇ ಆಗಿ ಪರಿವರ್ತಿಸುತ್ತೇವೆ.

# ಕಿತ್ತೂರು ಕರ್ನಾಟಕ



## ಸಾಧನೆಗಳು

- **ಕಿತ್ತೂರು ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರ (ಕೆಕೆಡಿಎ)** ಸ್ಥಾಪಿಸಿದ್ದೇವೆ.
- **ಬೆಳಗಾವಿ-ಕಿತ್ತೂರು-ಧಾರವಾಡ ರೈಲ್ವೆ ಯೋಜನೆ**ಗೆ ಚಾಲನೆ ನೀಡಿ, ಯೋಜನೆಗೆ **₹ 150 ಕೋಟಿ** ಮೀಸಲಿಟ್ಟಿದ್ದೇವೆ. ದೀರ್ಘಾವಧಿಯಿಂದ ಬಾಕಿ ಉಳಿದಿರುವ **ಬಾಗಲಕೋಟೆ-ಕುಡಚಿ ರೈಲು ಮಾರ್ಗ**ವನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಬಜೆಟ್‌ನಲ್ಲಿ **₹ 210 ಕೋಟಿ** ಘೋಷಿಸಿದ್ದೇವೆ.
- **ಕಿತ್ತೂರು ಕರ್ನಾಟಕ ಪ್ರದೇಶಕ್ಕೆ ₹ 5,701 ಕೋಟಿ** ವೆಚ್ಚದಲ್ಲಿ 13 ನೀರಾವರಿ ಮತ್ತು ಕೆರೆ ತುಂಬಿಸುವ ಯೋಜನೆಗಳನ್ನು ಆರಂಭಿಸಿದ್ದೇವೆ.
- 2023-24ರ ರಾಜ್ಯ ಬಜೆಟ್‌ನಲ್ಲಿ **₹ 1,000 ಕೋಟಿ** ಮೀಸಲಿಡುವ ಮೂಲಕ **ಕಳಸಾ ಬಂಡೂರಿ ಯೋಜನೆ**ಯನ್ನು ಪೂರ್ಣಗೊಳಿಸುವುದಾಗಿ ಘೋಷಿಸಿದ್ದೇವೆ.
- **40,000 ಹೆಕ್ಟೇರ್ ಕೃಷಿ ಭೂಮಿ**ಗೆ ನೀರು ಒದಗಿಸುವ **ಕೆರೂರು ಏತ ನೀರಾವರಿ ಯೋಜನೆ**ಗೆ ಬಜೆಟ್‌ನಲ್ಲಿ **₹ 528 ಕೋಟಿ** ಘೋಷಿಸಿದ್ದೇವೆ.
- **'ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ'**ಗೆ 2023-24ನೇ ಸಾಲಿನ ಬಜೆಟ್‌ನಲ್ಲಿ ₹ 355 ಕೋಟಿ ಮೀಸಲಿಟ್ಟಿದ್ದು , 20 ಕುರಿ ಮತ್ತು 1 ಮೇಕೆ ಘಟಕ ಸ್ಥಾಪಿಸಲು 20 ಸಾವಿರ ಫಲಾನುಭವಿಗಳಿಗೆ ತಲಾ **₹ 1.75 ಲಕ್ಷ** ಆರ್ಥಿಕ ನೆರವು ನೀಡಿದ್ದೇವೆ.

## ಭರವಸೆಗಳು

**01** ಬೆಳಗಾವಿಯನ್ನು ಮುಂಬೈ, ಬೆಂಗಳೂರು, ಚೆನ್ನೈ ಮತ್ತು ಇತರ ಪ್ರಮುಖ ಮೆಟ್ರೋಪಾಲಿಟನ್ ಪ್ರದೇಶಗಳೊಂದಿಗೆ ಸಂಪರ್ಕ ಕಲ್ಪಿಸುವ ಮೂಲಕ ಕಿತ್ತೂರು ಕರ್ನಾಟಕವನ್ನು **'ಲಾಜಿಸ್ಟಿಕ್ಸ್ ಮತ್ತು ವೇರ್‌ಹೌಸಿಂಗ್ ಹಬ್'** ಆಗಿ ರೂಪಿಸುತ್ತೇವೆ.

**02** **ಬ್ಯಾಡಗಿಯಲ್ಲಿ ಸ್ಪೈಸ್ ಪಾರ್ಕ್** ನಿರ್ಮಾಣ ಕಾರ್ಯವನ್ನು ತ್ವರಿತಗೊಳಿಸುತ್ತೇವೆ, ಈ ಪ್ರದೇಶದಲ್ಲಿ ಮಸಾಲೆ ಪದಾರ್ಥಗಳ ಮಾರುಕಟ್ಟೆ ಸೌಲಭ್ಯ ಸುಧಾರಿಸುತ್ತೇವೆ.


**03** ಶಾಲಾ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳ ಸುಧಾರಣೆಗಾಗಿ ವಲಯದ ಪ್ರತಿ ತಾಲೂಕಿನಲ್ಲಿ 2 **ಪಿಎಂ-ಶ್ರೀ ಶಾಲೆ**ಗಳನ್ನು ಸ್ಥಾಪಿಸುತ್ತೇವೆ.

**04** **ಬಬಲೇಶ್ವರ, ವಿಜಯಪುರ** ಮತ್ತು ಈ ಭಾಗದ ಇನ್ನಿತರ ಪ್ರದೇಶಗಳಲ್ಲಿ **ನೀರಾವರಿ ಮತ್ತು ಕುಡಿಯುವ ನೀರಿನ ಸೌಲಭ್ಯ** ಒದಗಿಸುವ ಉದ್ದೇಶಕ್ಕಾಗಿ ಕೃತಕ ಕೆರೆಗಳನ್ನು ನಿರ್ಮಿಸಲು **₹ 100 ಕೋಟಿ** ಮಂಜೂರು ಮಾಡುತ್ತೇವೆ.

**05** **'ಮಿಷನ್ ಕನೆಕ್ಟ್ ಕರ್ನಾಟಕ'**ದ ಅಡಿಯಲ್ಲಿ ಪ್ರಾದೇಶಿಕ ವಾಯುಯಾನ ಸಂಪರ್ಕವನ್ನು ಸುಧಾರಿಸಲು ಉಡಾನ್ ಯೋಜನೆಯಡಿ **ಬಾಗಲಕೋಟೆಯಲ್ಲಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ**ವನ್ನು ಸ್ಥಾಪಿಸುತ್ತೇವೆ.



# ಕಲ್ಯಾಣ ಕರ್ನಾಟಕ



## ಸಾಧನೆಗಳು

- 2023-24ರಲ್ಲಿ **ಕೆಕೆಆರ್‌ಡಿಬಿಗೆ ₹ 5,000 ಕೋಟಿ** ಮೀಸಲಿಡುವ ಮೂಲಕ ಕಲ್ಯಾಣ ಕರ್ನಾಟಕದ ಜನತೆಗೆ ನೀಡಿದ ಭರವಸೆಯನ್ನು ಈಡೇರಿಸಿದ್ದೇವೆ.
- ಜಿಲ್ಲೆಯ ಕೃಷಿ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತಕ್ಕೆ **₹ 5,000 ಕೋಟಿ** ಅನುದಾನ ನೀಡಿದ್ದೇವೆ.
- **₹ 7,650 ಕೋಟಿ** ವೆಚ್ಚದಲ್ಲಿ **411 ಕಿಲೋಮೀಟರ್ ಉದ್ದದ ಬೀದರ್-ಕಲಬುರಗಿ-ಬಳ್ಳಾರಿ ರಸ್ತೆಯ ಚತುಷ್ಪಥ ಯೋಜನೆ**ಗೆ ಚಾಲನೆ ನೀಡಿದ್ದೇವೆ.
- ಈ ಭಾಗದ ಜನರ 4 ದಶಕಗಳ ಬೇಡಿಕೆಯಾದ **ಬೀದರ್-ನಾಂದೇಡ್ ರೈಲ್ವೆ ಮಾರ್ಗ**ದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿದ್ದೇವೆ.
- **ಗದಗ-ಯಲವಿಗಿ ರೈಲ್ವೆ ಯೋಜನೆ** ಅನುಷ್ಠಾನಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧವಾಗುತ್ತಿದ್ದು, ಯೋಜನೆಗೆ **₹ 600 ಕೋಟಿ ಅನುದಾನ** ಒದಗಿಸಿದ್ದೇವೆ.
- **ಸೂರತ್-ಚೆನ್ನೈ ಆರ್ಥಿಕ ಕಾರಿಡಾರ್**ಗೆ ಅಡಿಪಾಯ ಹಾಕಿದ್ದೇವೆ. ಇದು ಕಲ್ಯಾಣ ಕರ್ನಾಟಕದಲ್ಲಿ ಕೈಗಾರಿಕೆಗಳು ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದಲ್ಲದೆ ಪ್ರವಾಸಿ ಕೇಂದ್ರಗಳು ಮತ್ತು ಯಾತ್ರಾ ಸ್ಥಳಗಳ ಪ್ರಯಾಣ ಸುಗಮವಾಗಿಸುತ್ತದೆ.

## ಭರವಸೆಗಳು

**01** ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ **₹ 7,500 ಕೋಟಿ ಅನುದಾನ** ನೀಡುತ್ತೇವೆ.

**02** **ಕೊಪ್ಪಳ ಮತ್ತು ಯಾದಗಿರಿ**ಯಲ್ಲಿ ಏಮ್ಸ್ ಮಾದರಿಯಲ್ಲೇ **ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್)** ಸ್ಥಾಪಿಸುತ್ತೇವೆ.

**03** **ಕೃಷ್ಣಾ ಮೇಲ್ದಂಡೆ**ಯಂತಹ ಬಾಕಿ ಇರುವ ಪ್ರಮುಖ ನೀರಾವರಿ ಯೋಜನೆಗಳು ಮತ್ತು ಎಲ್ಲಾ ಏತ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಮೂಲಕ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುತ್ತೇವೆ.


**04** 10 ಗಿಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದಿಸಲು **ಮೆಗಾ ಸೋಲಾರ್ ಪಾರ್ಕ್** ಅಭಿವೃದ್ಧಿಪಡಿಸುತ್ತೇವೆ.

**05** **ಬೀದರ್‌ನಲ್ಲಿ ಅತ್ಯಾಧುನಿಕ ಸೌಲಭ್ಯದ ಆಹಾರ ಸಂಸ್ಕರಣಾ ಪಾರ್ಕ್**ಗಳನ್ನು ಸ್ಥಾಪಿಸಲು ಕೆ-ಅಗ್ರಿ ಫಂಡ್ ಬಳಸುತ್ತೇವೆ.

**06** ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕವಾಗಿ **'ಶುದ್ಧ ಜಲ ಯೋಜನೆ'** ಜಾರಿಗೆ **₹ 1,000 ಕೋಟಿ** ಅನುದಾನ ಮೀಸಲಿಡುತ್ತೇವೆ. ಅದರ ಮೂಲಕ ಈಗಿರುವ ನೀರಿನ ಸ್ಥಾವರಗಳ ಆಧುನೀಕರಣ ಮತ್ತು ನಿರ್ವಹಣೆಯನ್ನು ಕೈಗೆತ್ತಿಕೊಳ್ಳುತ್ತೇವೆ. ಅಲ್ಲದೇ, ಪ್ರತಿಯೊಬ್ಬರಿಗೂ ಶುದ್ಧ ನೀರನ್ನು ಲಭ್ಯವಾಗಿಸಲು **2,500 ಶುದ್ಧ ಜಲ ಸ್ಥಾವರ**ಗಳನ್ನು (ಮಿನಿ ವಾಟರ್ ಫಿಲ್ಟರೇಶನ್ ಘಟಕಗಳು) ಸ್ಥಾಪಿಸುತ್ತೇವೆ.

**07** **'ಮಿಷನ್ ಕನೆಕ್ಟ್ ಕರ್ನಾಟಕ'**ದ ಅಡಿಯಲ್ಲಿ ಪ್ರಾದೇಶಿಕ ವಾಯುಯಾನ ಸಂಪರ್ಕ ಮತ್ತು ಪ್ರವಾಸೋದ್ಯಮ ಕಲ್ಪಿಸಲು **ಉಡಾನ್ ಯೋಜನೆ**ಯಡಿ **ಕೊಪ್ಪಳದಲ್ಲಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ**ವನ್ನು ಸ್ಥಾಪಿಸುತ್ತೇವೆ.

# ಮಲೆನಾಡು ಕರ್ನಾಟಕ



## ಸಾಧನೆಗಳು

- 8 ತಿಂಗಳ ಅಲ್ಪಾವಧಿಯಲ್ಲಿ **₹ 220 ಕೋಟಿ ವೆಚ್ಚದಲ್ಲಿ ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ** ನಿರ್ಮಿಸಿದ್ದೇವೆ.
- ಕೊಡಗಿನ ವೀರ ಯೋಧ ಜನರಲ್ ತಿಮ್ಮಯ್ಯ ಅವರ ಸ್ಮರಣಾರ್ಥವಾಗಿ **ಕೊಡಗಿನಲ್ಲಿ ಜನರಲ್ ತಿಮ್ಮಯ್ಯ ಮ್ಯೂಸಿಯಂ** ಸ್ಥಾಪಿಸಿದ್ದೇವೆ.
- **ಚಿಕ್ಕಮಗಳೂರು-ಬೇಲೂರು ಮಾರ್ಗ** ಸೇರಿದಂತೆ 4 ರೈಲು ಮಾರ್ಗ ಯೋಜನೆಗಳಿಗೆ **₹ 960 ಕೋಟಿ** ಹೆಚ್ಚುವರಿ ಅನುದಾನ ಒದಗಿಸಲಾಗಿದೆ.
- ಮಾನವ-ಆನೆ ಸಂಘರ್ಷವನ್ನು ತಡೆಯುವ ಉದ್ದೇಶದಿಂದ ತಡೆ ಬೇಲಿ ನಿರ್ಮಿಸಲು **₹ 100 ಕೋಟಿ** ಮೀಸಲಿಟ್ಟಿದ್ದೇವೆ.
- ಚಿಕ್ಕಮಗಳೂರಿನಲ್ಲಿ **₹ 325 ಕೋಟಿ** ವೆಚ್ಚದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಿದ್ದೇವೆ.
- **₹ 4,128 ಕೋಟಿ** ವೆಚ್ಚದಲ್ಲಿ 92 ಕಿ.ಮೀ, **ಮೈಸೂರು-ಕುಶಾಲನಗರ ಚತುಷ್ಪಥ ಹೆದ್ದಾರಿ** ಕಾಮಗಾರಿ ಕೈಗೆತ್ತಿಕೊಳ್ಳುತ್ತಿದ್ದೇವೆ.
- **₹ 994 ಕೋಟಿ** ವೆಚ್ಚದಲ್ಲಿ **ಶಿವಮೊಗ್ಗ-ಶಿಕಾರಿಪುರ-ರಾಣೆಬೆನ್ನೂರು** ರೈಲ್ವೆ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ.

## ಭರವಸೆಗಳು


**01** ಕಾಫಿ ಮಂಡಳಿ ಮಾದರಿಯಲ್ಲಿ ಸಂಶೋಧನಾ ಸಂಸ್ಥೆ ಸೇರಿದಂತೆ **ರಾಜ್ಯ ಅಡಿಕೆ ಮಂಡಳಿ** ಸ್ಥಾಪಿಸುತ್ತೇವೆ.

**02** **'ಮಿಷನ್ ಕನೆಕ್ಟ್ ಕರ್ನಾಟಕ'**ದ ಅಡಿಯಲ್ಲಿ ಪ್ರಾದೇಶಿಕ ವಾಯುಯಾನ ಸಂಪರ್ಕ ಕಲ್ಪಿಸಲು **ಉಡಾನ್** ಯೋಜನೆಯಡಿ **ಕೊಡಗು ಮತ್ತು ಚಿಕ್ಕಮಗಳೂರಿನಲ್ಲಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ**ಗಳನ್ನು ಸ್ಥಾಪಿಸುತ್ತೇವೆ.

**03** **ಶೃಂಗೇರಿಯಲ್ಲಿ ಅತ್ಯಾಧುನಿಕ 200 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ**ಯನ್ನು ಆದ್ಯತೆಯ ಮೇರೆಗೆ ಸ್ಥಾಪಿಸುತ್ತೇವೆ.

**04** **'ಮಿಷನ್ ಕನೆಕ್ಟ್ ಕರ್ನಾಟಕ'**ದ ಅಡಿಯಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ **'ಶಿವಮೊಗ್ಗ - ಶೃಂಗೇರಿ 'ಉತ್ತಮ ಚತುಷ್ಪಥ'** ರಸ್ತೆ ನಿರ್ಮಿಸುತ್ತೇವೆ.

**05** **ಶಿವಮೊಗ್ಗದಲ್ಲಿ ಆಯುರ್ವೇದ ಸಂಶೋಧನೆ ಮತ್ತು ತರಬೇತಿ ಸಂಸ್ಥೆ** ಸ್ಥಾಪಿಸುತ್ತೇವೆ.



# ಹಳೆ ಮೈಸೂರು ಪ್ರದೇಶ





# ಸಾಧನೆಗಳು

**ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ**ಗಾಗಿ **₹ 23,251 ಕೋಟಿ**ಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಅನುಮೋದನೆ ನೀಡಿದ್ದೇವೆ .ಇದು ರಾಮನಗರ ಜಿಲ್ಲೆಯ ನೀರಿನ ಬೇಡಿಕೆಯನ್ನು ಪೂರೈಸಲಿದೆ.

---

**₹ 8,000 ಕೋಟಿ ವೆಚ್ಚ**ದಲ್ಲಿ **ದಶಪಥ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ** ನಿರ್ಮಿಸಿದ್ದೇವೆ. ಇದು ಬೆಂಗಳೂರು ಮತ್ತು ಮೈಸೂರು ನಡುವಿನ ಪ್ರಯಾಣದ ಸಮಯವನ್ನು ಅರ್ಧದಷ್ಟು ಕಡಿಮೆ ಮಾಡಿದೆ.

---

**ದಕ್ಷಿಣ ಭಾರತದ ಮೊದಲ ವಂದೇ ಭಾರತ್ ರೈಲು** ಮೈಸೂರಿನಿಂದ ಚೆನ್ನೈ ಸೆಂಟ್ರಲ್‌ವರೆಗೆ ಸಂಚರಿಸುತ್ತಿದೆ.

---

ಮೈಸೂರಿನಲ್ಲಿ ಭಾರತದ ಮೊದಲ ಸೆಮಿಕಂಡಕ್ಟರ್ ಉತ್ಪಾದನಾ ಘಟಕ ಸ್ಥಾಪಿಸಲು ಇಂಟರ್ನ್ಯಾಷನಲ್ ಸೆಮಿಕಂಡಕ್ಟರ್ ಕನ್ಸೋರ್ಟಿಯಂ (ISMC)ನೊಂದಿಗೆ **3 ಬಿಲಿಯನ್ ಡಾಲರ್ ಮೊತ್ತದ ಒಪ್ಪಂದ ಪತ್ರಕ್ಕೆ ಸಹಿ** ಹಾಕಿದ್ದೇವೆ.

---

ಕಾಂಗ್ರೆಸ್ ಅವಧಿಯಲ್ಲಿ ಮುಚ್ಚಿದ **ಮಂಡ್ಯ ಮೈ ಶುಗರ್ ಕಾರ್ಖಾನೆಯನ್ನು ಪುನಾರಂಭಿಸಿದ್ದೇವೆ. ಕಬ್ಬಿನ ನ್ಯಾಯೋಚಿತ ಬೆಲೆ**ಯನ್ನು ಪ್ರಧಾನಿ ಮೋದಿ ಅವರ ಸರ್ಕಾರ **₹ 3,050**ಕ್ಕೆ ಹೆಚ್ಚಿಸಿದೆ. ಕಾಂಗ್ರೆಸ್ ಅವಧಿಯಲ್ಲಿ ಅದು ₹2,100 ಇತ್ತು. ರಾಜ್ಯ ಬಿಜೆಪಿ ಸರ್ಕಾರವು ನ್ಯಾಯೋಚಿತ ಬೆಲೆಗೆ ಹೆಚ್ಚುವರಿಯಾಗಿ ₹100 ಸೇರಿಸಿ, ಪ್ರತಿ ಟನ್ ಕಬ್ಬಿಗೆ ₹3,150 ನಿಗದಿಪಡಿಸಿದೆ.

---

ಕಿದ್ವಾಯಿ ಸಂಸ್ಥೆಯ ಅಡಿಯಲ್ಲಿ **ಮೈಸೂರು, ಶಿವಮೊಗ್ಗ ಮತ್ತು ಕಲಬುರಗಿಯಲ್ಲಿ ₹202 ಕೋಟಿ ವೆಚ್ಚದಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ**ಗಳನ್ನು ಸ್ಥಾಪಿಸುತ್ತಿದ್ದೇವೆ.

# ಭರವಸೆಗಳು

01 **ಮೈಸೂರಿನಲ್ಲಿ ಆಹಾರ ಸಂಸ್ಕರಣಾ ಪಾರ್ಕ್** ಸ್ಥಾಪಿಸಲು ಕೆ-ಅಗ್ರಿ ಫಂಡ್ ಬಳಸುತ್ತೇವೆ.

02 ಇಂಟರ್ನ್ಯಾಷನಲ್ ಸೆಮಿಕಂಡಕ್ಟರ್ ಕನ್ಸೋರ್ಟಿಯಂನೊಂದಿಗೆ ಜಿಲ್ಲಾ ಮಟ್ಟದಲ್ಲಿ **'ಎಲೆಕ್ಟ್ರಾನಿಕ್ ಉತ್ಪಾದನಾ ಕ್ಲಸ್ಟರ್'** ಮತ್ತು "ಇಂಟಿಗ್ರೇಟೆಡ್ ಪಾರ್ಕ್" ಸ್ಥಾಪಿಸುತ್ತೇವೆ.

03 **'ಮಿಷನ್ ಕನೆಕ್ಟ್ ಕರ್ನಾಟಕ'**ದ ಅಡಿಯಲ್ಲಿ ಪ್ರಾದೇಶಿಕ ವಾಯುಯಾನ ಸಂಪರ್ಕ ಕಲ್ಪಿಸಲು ಉಡಾನ್ ಯೋಜನೆಯಡಿ **ತುಮಕೂರಿನಲ್ಲಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ**ವನ್ನು ಸ್ಥಾಪಿಸುತ್ತೇವೆ.

04 ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಕಾರ್ಯಕ್ಷಮತೆಯನ್ನು ಕಾಯ್ದುಕೊಳ್ಳಲು, **ಪಿಪಿಪಿ ಮಾದರಿಯಲ್ಲಿ ಚಿಕ್ಕಬಳ್ಳಾಪುರ, ಕೋಲಾರ ಮತ್ತು ರಾಮನಗರದಲ್ಲಿ ಶೀತಲೀಕರಣ ಘಟಕ**ಗಳನ್ನು ಸ್ಥಾಪಿಸುತ್ತೇವೆ. ಈ ಪ್ರದೇಶದ ಜಿಲ್ಲಾ ಕೇಂದ್ರಗಳಲ್ಲಿ ನೂಲು ಬ್ಯಾಂಕ್‌ಗಳನ್ನು ಸ್ಥಾಪಿಸುತ್ತೇವೆ ಮತ್ತು ಸ್ಟಾರ್ಟ್‌ಅಪ್‌ಗಳ ಸಹಭಾಗಿತ್ವದೊಂದಿಗೆ **ಡಿಜಿಟಲ್ ಪರಿಸರ ವ್ಯವಸ್ಥೆ ರೂಪಿಸಲು 'ಫಾರ್ಮ್ ಟು ರಿಟೇಲ್' ಯೋಜನೆ** ಜಾರಿಗೊಳಿಸುತ್ತೇವೆ.

05 ಈ ಪ್ರದೇಶದಲ್ಲಿ ತೆಂಗು ಆಧಾರಿತ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಮತ್ತು ತೆಂಗು ಉತ್ಪನ್ನಗಳ ರಫ್ತು ಉತ್ತೇಜಿಸಲು **₹ 50 ಕೋಟಿ ಅನುದಾನ**ವನ್ನು ನೀಡುತ್ತೇವೆ.

06 ಹಳೇ ಮೈಸೂರು ಪ್ರದೇಶದಲ್ಲಿ ಪ್ರವಾಸೋದ್ಯಮದ ಸುಧಾರಣೆಗಾಗಿ **₹ 100 ಕೋಟಿ** ಮಂಜೂರು ಮಾಡುವ ಜತೆಗೆ ಈ ಕೆಳಗಿನವುಗಳನ್ನು ಅನುಷ್ಠಾನಗೊಳಿಸುತ್ತೇವೆ.

- ಶ್ರವಣಬೆಳಗೊಳದಲ್ಲಿ **ಆಧುನಿಕ ವಸತಿ ಸೌಕರ್ಯ ಸ್ಥಾಪನೆ ಮತ್ತು ಬಸ್ ಸಂಪರ್ಕ ಸುಧಾರಣೆ.**
- ಟಿ ನರಸೀಪುರ ಮತ್ತು ಕೆ.ಆರ್ ಪೇಟೆ ನಡೆಯುವ **ತ್ರಿವೇಣಿ ಸಂಗಮ ಕುಂಭ ಮೇಳಕ್ಕೆ** ಅನುಕೂಲವಾಗುವಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಅಗತ್ಯ ವ್ಯವಸ್ಥೆ ಕಲ್ಪಿಸುವುದು.

07 **ಚಾಮರಾಜನಗರದಲ್ಲಿ ಏಮ್ಸ್ ಮಾದರಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್)** ಸ್ಥಾಪಿಸುತ್ತೇವೆ.


ಡಬಲ್ ಎಂಜಿನ್ ಸರ್ಕಾರ

ಕರ್ನಾಟಕದ ಅಭಿವೃದ್ಧಿಯ ಸಾಕಾರ

## ನಿಮ್ಮ ಮತದಿಂದ ಬಿಜೆಪಿಗೆ ಪೂರ್ಣ ಬಹುಮತ




# ನಿಮ್ಮ ಸಲಹೆ
# ನಿಮ್ಮ ಪ್ರಣಾಳಿಕೆ
# ನಿಮ್ಮ ಸರ್ಕಾರ





**BHARATIYA JANATA PARTY**
**KARANATAKA**

BJP Bhawan, 11th Cross, Temple Street,
Malleshwaram, Bengaluru-560003, Karnataka

**www.karnataka.bjp.org**

Scan for More Information